# ವಿಪ್ರನುಡಿ

**ಸ್ವಾವಲಂಬನೆ-ಸಂಘಟನೆ-ಸಂಸ್ಕಾರ**

ಸಂಪುಟ-41 ಕ್ರೋಧಿ ನಾಮ ಸಂವತ್ಸರ, ಚೈತ್ರ - ವೈಶಾಖ ಮಾಸ, ಮೇ - 2024, ಸಂಚಿಕೆ-2, ಪುಟಗಳು-32 ಬೆಲೆ ರೂ.15/-

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಗಾಯತ್ರಿಭವನ, ಬೆಂಗಳೂರು

## ವಿಪ್ರ ಸಮಾಜದ ಹಿರಿಯಣ್ಣ - ಹೊ.ನಾ. ಹಿರಿಯಣ್ಣಸ್ವಾಮಿಯವರಿಗೆ ಶ್ರದ್ಧಾಂಜಲಿ













# ನಾಡಿನಾದ್ಯಂತ ಶಂಕರಾಚಾರ್ಯರ ಜಯಂತ್ಯುತ್ಸವ




ಜಗದ್ಗುರು ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳ ಅನುಗ್ರಹ ಆಶೀರ್ವಚನ



ಮಲ್ಲೇಶ್ವರಂ ಬ್ರಾಹ್ಮಣ ಸಭಾ ಟ್ರಸ್ಟ್



ಹಾವೇರಿ



ಯಲಹಂಕ



ಶಿವಮೊಗ್ಗ

# ಶ್ರೀ ಅಶೋಕ್ ಹಾರನಹಳ್ಳಿಯವರಿಗೆ ಸನ್ಮಾನ



ಮುಧೋಳ ಬ್ರಾಹ್ಮಣ ಸಂಘ



ಬೆಳಗಾವಿ ಜಿಲ್ಲಾ ಬ್ರಾಹ್ಮಣ ಸಮಾಜ ಟ್ರಸ್ಟ್

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರಿ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70
ದೂರವಾಣಿ: 26771695, 26770066
E-mail: info@akbms.com
Website: www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎಸ್.**

ಖಜಾಂಚಿ
**ವೆಂಕಟೇಶ ಎಸ್, ನಾಯಕ್**

**ವಿಪ್ರನುಡಿ ಪ್ರಕಟಣಾ ಸಮಿತಿ**

ಪ್ರಧಾನ ಸಂಪಾದಕರು
**ಡಾ। ಎಂ.ಕೆ. ಶ್ರೀಧರ್**

ಸಮಿತಿ ಸದಸ್ಯರು
**ಜ್ಯೋತಿಷಿ ಬ।। ಡಾ। ಮುದ್ರಾಡಿ ವಾಸುದೇವ ಭಟ್**
**ನಾರಾಯಣ ಭಟ್ ಹುಳೇಗಾರು**
**ಪ್ರಭಾಕರ ಕೆ.ಸಿ.**
**ಕಾರ್ತಿಕ್ ಬಾಪಟ್**
**ಟಿ.ಎಲ್.ಎಸ್. ಕುಮಾರ್**

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು–560 05. ದೂ : 26606061.

# ನಲ್ನುಡಿ

**ರಾಮೋ ವಿಗ್ರಹವಾನ್ ಧರ್ಮಃ ಸಾದುಃ ಸತ್ಯಪರಾಕ್ರಮಃ ।**
**ರಾಜ ಸರ್ವಸ್ಯ ಲೋಕಸ್ಯ ದೇವಾನಾಂ ಮಘವಾನಿವ ॥**

**॥ ರಾಮೋ ವಿಗ್ರಹವಾನ್ ಧರ್ಮಃ ॥**

ಈ ಮಾತನ್ನು ರಾಮಾಯಣದಲ್ಲಿ ಮಾರೀಚನು ರಾವಣನಿಗೆ ಹೇಳುತ್ತಾನೆ. ಚಿನ್ನದ ಜಿಂಕೆಯ ವೇಷಧರಿಸಿ ಹೋಗು ಎಂದಾಗ ಧರ್ಮವೇ ಮೂರ್ತಿವೆತ್ತ ರೂಪವೇ ಶ್ರೀರಾಮ. ನಾನು ಆ ಕೆಲಸ ಮಾಡಲಾರೆ ಎನ್ನುತ್ತಾನೆ. ಹಾಗಾದರೆ ಈ ಧರ್ಮದ ಪರಿಕಲ್ಪನೆ ಏನು? ಅದು ಸ್ಫುಟವಾಗಬೇಕು, ಸ್ಪಷ್ಟವಾಗಬೇಕು. ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆ ಅರ್ಥವನ್ನು ಧರ್ಮ ಎಂಬುದಕ್ಕೆ ಕೊಡಲಾಗುತ್ತದೆ. ಉದಾಹರಣೆಗೆ ವಾಡಿಕೆಯಲ್ಲಿ ಇರುವುದನ್ನು ಹೇಳುವುದಾದರೆ ಕನ್ನಡದಲ್ಲಿ ಒಂದು ಗಾದೆ ಮಾತಿದೆ. "ಧರ್ಮಕ್ಕೆ ದಟ್ಟಿ ಕೊಟ್ರೆ ಹಿತ್ತಲಿಗೆ ಬಂದು ಮೊಳ ಹಾಕಿದರಂತೆ" ಎಂದು. ಈ ಗಾದೆ ಎನ್ನುವುದು ನಮ್ಮ ದೇಶದ ಸಾರ್ವಜನಿಕ ಸಾರಸ್ವತ ಸಂಪತ್ತು. ಇಲ್ಲಿ ಧರ್ಮದ ಅರ್ಥ ದಾನ ಎಂದು. ಈ ದಾನವನ್ನು ಅಳತೆ ಮಾಡುವುದು ಸರಿಯಲ್ಲ. ಸಂತೋಷವಾಗಿ ದಾನ ಮಾಡಿದ್ದಾರೆ ಅದನ್ನು ಸ್ವೀಕಾರ ಮಾಡಬೇಕು ಅಷ್ಟೆ. ಹಾಗೆ ದಾನ ಧರ್ಮ ಎನ್ನುವ ರೂಢಿಯ ಶಬ್ದ ಕೂಡ ಇದೆ. ಇವತ್ತಿನ ದಿನಗಳಲ್ಲಿ ಕೆಲವು ಸ್ವಯಂಘೋಷಿತ ಬುದ್ಧಿಜೀವಿಗಳು ಧರ್ಮವನ್ನು Religion ಎಂದು ಅನುವಾದ ಮಾಡುತ್ತಾರೆ. ಧರ್ಮ ಎನ್ನುವ ಶಬ್ದ ಅತ್ಯಂತ ಸನಾತನವಾದದ್ದು. ಕೃತಯುಗದಲ್ಲೂ ಇತ್ತು, ತ್ರೇತಾಯುಗದಲ್ಲೂ ಇತ್ತು. ಶಬ್ದ ಮಾತ್ರ ಅಲ್ಲ ಅದರ ಪರಿಕಲ್ಪನೆ ಕೃತಯುಗದಲ್ಲಿ ಕೃತಿರೂಪದಲ್ಲೂ ಇತ್ತು. ರಾಜನೂ ಇರಲಿಲ್ಲ ಆಡಳಿತವೂ ಇರಲಿಲ್ಲ. ಅಂದರೆ ರಾಜ್ಯವು ಇರಲಿಲ್ಲ. ಆದರೆ ಜನ ಇದ್ದರು. ಅವರು ಒಟ್ಟಿಗೆ ಹೊಂದಾಣಿಕೆಯಿಂದ ಬದುಕನ್ನು ನಡೆಸುತ್ತಿದ್ದರು. ಅವರೆಲ್ಲರನ್ನೂ ಧರ್ಮ ಒಂದುಗೂಡಿಸುತ್ತಾ ಇತ್ತು. ಎಲ್ಲರನ್ನೂ ರಕ್ಷಣೆ ಮಾಡುತ್ತಿದ್ದುದು ಧರ್ಮ. ಯಾವಾಗ ಧರ್ಮ ನಾಶ ಸ್ಥಿತಿಗೆ ಬರುತ್ತದೆ ಆಗ ಜನ್ಮತಾಳಿ ಬಂದು ತಡೆಯುತ್ತೇನೆ ಎಂದು ದ್ವಾಪರಯುಗದಲ್ಲಿ ಶ್ರೀ ಕೃಷ್ಣನು ಹೇಳಿದ್ದಾನೆ.

॥ ಧರ್ಮೋ ರಕ್ಷತಿ ರಕ್ಷಿತಃ ॥

**– ಛಾಯಾಪತಿ ಕೆ.ಎನ್.**

**ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತ ವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ, ವಾಣಿಜ್ಯಕ್ಕೆ ಸಂಬಂಧಿಸಿದ್ದು) ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.**

**– ಸಂಪಾದಕ ಮಂಡಳಿ**

ಶ್ರೀ ಗುರುಃ ಶರಣಮ್

# ಅಕ್ಷಯ ತೃತೀಯಾ

– ಡಾ॥ ಹಿತ್ಲಳ್ಳಿ ಸೂರ್ಯನಾರಾಯಣ ನಾಗೇಂದ್ರ ಭಟ್ಟ




ವೈಶಾಖ ಮಾಸ ಶುಕ್ಲ ಪಕ್ಷದ ತೃತೀಯಾ (ತದಿಗೆ) ಅಕ್ಷಯ ತೃತೀಯಾ. ಅದು ಸತ್ಯ (ತ್ರೇತಾ)ಯುಗವು ಆರಂಭವಾದ ದಿನ. ಅಂದು ಕೃತ್ತಿಕಾ ರೋಹಿಣೀ ಯೋಗವಿರುವಾಗ ಮಾಡಿದ ಸ್ನಾನ ದಾನ ಮುಂತಾದವುಗಳಿಗೆ ಅಕ್ಷಯ (ಕಡಿಮೆಯಾಗದ) ಪುಣ್ಯವು ಲಭಿಸುತ್ತದೆ ಎಂದು ಧರ್ಮ ಗ್ರಂಥಗಳಲ್ಲಿ ಹೇಳಿದೆ. ವೈಶಾಖ ಮಾಸದಲ್ಲಿ ಪ್ರತಿದಿನವೂ ಮಂಗಳ ಸ್ನಾನ ಮಾಡಬೇಕೆಂದು ಪದ್ಮ ಪುರಾಣದಲ್ಲಿ ಹೇಳಿದ್ದರೂ ಅಕ್ಷಯ ತೃತೀಯೆ ದಿನ ಅದನ್ನು ಪ್ರಯತ್ನ ಪೂರ್ವಕವಾಗಿ ಮಾಡಿದರೆ ವಿಶೇಷ ಫಲವುಂಟು.

ಬ್ರಹ್ಮ ಪುರಾಣದಲ್ಲಿ ಹೀಗಿದೆ : ಅಕ್ಷಯ ತೃತೀಯೆಯ ದಿನ ವಿಷ್ಣುವನ್ನು ಉದ್ದೇಶಿಸಿ ಯವ(ಗೋಧಿ)ಗಳಿಂದ ಹೋಮ ಮಾಡಬೇಕು. ಯವಗಳಿಂದಲೇ ವಿಷ್ಣುವನ್ನು ಪೂಜಿಸಬೇಕು, ಯವಗಳನ್ನು ದಾನ ಮಾಡಬೇಕು, ಪ್ರಯತ್ನ ಪೂರ್ವಕವಾಗಿ ಯವಗಳನ್ನು ತಿನ್ನಿಸಬೇಕು. ಶಂಕರನನ್ನೂ, ಗಂಗೆಯನ್ನೂ, ಕೈಲಾಸವನ್ನೂ, ಹಿಮಾಲಯವನ್ನೂ, ಸಗರನ ಮಕ್ಕಳಿಗೆ ಸದ್ಗತಿಯನ್ನು ಸಂಪಾದಿಸಿ ಕೊಟ್ಟ ಭಗೀರಥನನ್ನೂ ಪೂಜಿಸಬೇಕು.

ಸ್ಕಾಂದ ಪುರಾಣದಲ್ಲಿ ಹೀಗಿದೆ : ವೈಶಾಖ ಶುಕ್ಲ ತದಿಗೆಯನ್ನು ಅಕ್ಷಯ ತೃತೀಯಾ ಎಂದು ಹೆಸರಿಸಲಾಗಿದೆ. ಆ ದಿನ ಜಗತ್ತಿಗೆ ಸ್ವಾಮಿಯಾದ ಶ್ರೀಮನ್ನಾರಾಯಣನನ್ನು ಅತ್ಯಂತ ಶುಭವಾದ ಗಂಧವನ್ನು ಲೇಪಿಸಿ ಪೂಜಿಸಬೇಕು.

ಭವಿಷ್ಯ ಪುರಾಣದಲ್ಲಿ, ಅಕ್ಷಯ ತೃತೀಯೆಯಂದು ವಿಧಿವತ್ತಾಗಿ ಸ್ನಾನ ಮಾಡಿದರೆ ಮೂರು ತಿಂಗಳ ಕಾಲ ಸ್ನಾನ ಮಾಡಿದ ಪುಣ್ಯ ಫಲವು ಲಭಿಸುವುದೆಂದು ಹೇಳಿದೆ. ಈ ದಿನ ಗಂಗೆಯಲ್ಲಿ ಮಿಂದರೆ, ಅದು ಇನ್ನೂ ವಿಶೇಷವೆ ಸರಿ.

ಮದನ ರತ್ನ ಎಂಬ ಧರ್ಮ ಶಾಸ್ತ್ರ ಗ್ರಂಥದಲ್ಲಿ ಹೀಗೆ ಹೇಳಿದೆ : ಈ ಅಕ್ಷಯ ತೃತೀಯೆಯ ದಿನ ಮಾಡಿದ ಹೋಮವಾಗಲಿ ದಾನವಾಗಲಿ ಕ್ಷೀಣವಾಗುವುದಿಲ್ಲ. ಆ ಕಾರಣದಿಂದ ಈ ತೃತೀಯೆ ಅಕ್ಷಯ ತೃತೀಯೆ ಎನ್ನಲಾಗಿದೆ. ದೇವತೆಗಳನ್ನೂ ಪಿತೃಗಳನ್ನೂ ಉದ್ದೇಶಿಸಿ ಏನನ್ನು ಮಾಡಿದರೂ ಅದು ಅಕ್ಷಯವಾಗುತ್ತದೆ. ಈ ಶ್ಲೋಕದಲ್ಲಿ ಭಾರತ ಎಂಬ ಸಂಬೋಧನಾ ಶಬ್ದವಿದೆ. ಇದನ್ನು ಯುಧಿಷ್ಠಿರನಿಗೆ ಸ್ವತಃ ಶ್ರೀಕೃಷ್ಣನು ಹೇಳುತ್ತಾನೆ.

ವಿಷ್ಣುವಿನ ಹತ್ತು ಅವತಾರಗಳಲ್ಲಿ ಆರನೆಯ ಅವತಾರವಾದ ಪರಶುರಾಮನ ಜಯಂತಿಯು ಅಕ್ಷಯ ತೃತೀಯೆಯಂದು ಬರುತ್ತದೆ. ಪರಶುರಾಮ ಕ್ಷೇತ್ರವಾದ ಕೊಂಕಣ ಸೀಮೆಯ ಜನರಿಗೆ ಇದು ಅತ್ಯಂತ ಮಹತ್ತ್ವಪೂರ್ಣವಾಗಿದೆ. ವೇದವ್ಯಾಸರು ಈ ದಿನವೇ ಶ್ರೀ ಮಹಾಗಣಪತಿಯೊಂದಿಗೆ ಆಸೀನರಾಗಿ ಮಹಾಭಾರತವನ್ನು ರಚಿಸಲು ಉಪಕ್ರಮಿಸಿದರು. ಗಂಗೆಯು ಭೂಮಿಗೆ ಅವತರಣ ಮಾಡಿದ ಶುಭ ದಿನವೂ ಇದೇ. ಅನ್ನಪೂರ್ಣಾ ದೇವಿಯು ಈ ದಿನ ಜನಿಸಿರುವುದರಿಂದ ಇದನ್ನು ನವಾನ್ನ ದಿನವಾಗಿ ಆಚರಿಸುತ್ತಾರೆ. ಕುಬೇರನು ಕೈಲಾಸದಲ್ಲಿ ಶಿವನನ್ನು ಪ್ರಾರ್ಥಿಸಿ, ಅಪಾರವಾದ ಸಂಪತ್ತನ್ನು ಈ ದಿನವೇ ಪಡೆದನು. ಯುಧಿಷ್ಠಿರನು ಧೌಮ್ಯ ಮುನಿಯ ಸೂಚನೆಯಂತೆ ಸೂರ್ಯನನ್ನು ಪ್ರಾರ್ಥಿಸಿ ಅಕ್ಷಯ ಪಾತ್ರೆಯನ್ನು ಪಡೆದದ್ದು ಈ ದಿನವೇ. ಸುಧಾಮನು ಅವಲಕ್ಕಿಯನ್ನು ಶ್ರೀ ಕೃಷ್ಣನಿಗೆ ಸಮರ್ಪಿಸಿ ಮನೋಗತವನ್ನು ನಿವೇದಿಸದಿದ್ದರೂ ಸಮಸ್ತ ಸಂಪತ್ತನ್ನು ಪಡೆದದ್ದೂ ಈ ದಿನವೇ. ದ್ರೌಪದಿಯ ಸೀರೆಯು ಶ್ರೀ ಕೃಷ್ಣನ ಅನುಗ್ರಹದಿಂದ ಅಕ್ಷಯವಾದ ದಿನವೂ ಇದೇ. ಈ ದಿನವೇ ಆದಿ ಶಂಕರರು ಕನಕಧಾರಾ ಸ್ತೋತ್ರದಿಂದ ಪ್ರಾರ್ಥಿಸಿದಂತೆ ಕೇರಳದ ವೃದ್ಧೆಯೊಬ್ಬಳು ಒಂದು ನೆಲ್ಲಿಕಾಯಿಗೆ ಪ್ರತಿಯಾಗಿ ಮನೆಯ ತುಂಬಾ ಚಿನ್ನದ ನೆಲ್ಲಿಕಾಯಿಯನ್ನು ಪಡೆದಳು.

ಒರಿಸ್ಸಾ ರಾಜ್ಯದ ರೈತರು ಕೃಷಿಕಾರ್ಯವನ್ನು ಈ ದಿನವೇ ಆರಂಭಿಸುತ್ತಾರೆ. ಜಗನ್ನಾಥ ಪುರಿಯ ವಿಶ್ವ ಪ್ರಸಿದ್ಧ ರಥ ನಿರ್ಮಾಣ ಈ ದಿನವೇ ಆರಂಭವಾಗುತ್ತದೆ. ಶ್ರೀ ನೃಸಿಂಹ ಜಯಂತಿಯ ರಥೋತ್ಸವದ ಪೂರ್ವಾಂಗವೂ ಈ ದಿನವೇ ಮೊದಲಾಗುತ್ತದೆ.

ವರ್ಷದ ಮೂರೂವರೆ (ಸಾಢೇ ತೀನ್) ಮುಹೂರ್ತಗಳಲ್ಲಿ ಅಕ್ಷಯ ತೃತೀಯೆಯೂ ಒಂದು. ಯುಗಾದಿ, ವಿಜಯ ದಶಮಿ ಮತ್ತು ದೀಪಾವಳಿ ಎಲ್ಲಾ ಕಾರ್ಯಗಳನ್ನು ಆರಂಭಿಸಲು ಪ್ರಶಸ್ತವಾಗಿರುವಂತೆ ಅಕ್ಷಯ ತೃತೀಯೆಯೂ ಪ್ರಶಸ್ತವಾಗಿದೆ. ವಿಶೇಷವೆಂದರೆ, ಅಕ್ಷಯ ತೃತೀಯೆಯಂದು ಮೇಷ ರಾಶಿಯ ಸೂರ್ಯನೂ ವೃಷಭ ರಾಶಿಯ ಚಂದ್ರನೂ ಬಲಿಷ್ಠರಾಗಿರುವುದರಿಂದ ಶುಭ ಫಲವನ್ನು ಕೊಡುತ್ತಾರೆ.

ಮನುಷ್ಯರ ಒಂದು ವರ್ಷ ದೇವ – ಪಿತೃಗಳಿಗೆ ಒಂದು ದಿವಸವೆಂದೂ, ಉತ್ತರಾಯಣವು ಹಗಲೆಂದೂ ದಕ್ಷಿಣಾಯನವು ರಾತ್ರಿಯೆಂದೂ ಹೇಳಲಾಗಿದೆ. ಮಕರ ಕುಂಭ ಮಾಸಗಳು ಬೆಳಗಿನ ಸಮಯವಾದರೆ ಮೀನ ಮೇಷ ಮಾಸಗಳು ಮಧ್ಯಾಹ್ನವಾಗುತ್ತವೆ. ಮೇಷ ಮಾಸದಲ್ಲಿ ಬರುವ ಅಕ್ಷಯ ತೃತೀಯೆ ದೇವತೆಗಳಿಗೂ ಪಿತೃಗಳಿಗೂ ನೈವೇದ್ಯ / ತರ್ಪಣಗಳಿಗೆ ಅತ್ಯಂತ ಪ್ರಶಸ್ತವಾಗುತ್ತದೆ. ಈ ಕಾರಣದಿಂದ ಈ ದಿನ ಪೂಜೆ, ತಿಲ ತರ್ಪಣ ಮುಂತಾದ ಧಾರ್ಮಿಕ ವಿಧಾನವನ್ನು ನೆರವೇರಿಸುವುದು ಸಮಂಜಸವಾಗುತ್ತದೆ.

ಬಂಗಾಳದಲ್ಲಿ ಈ ದಿನ ಹೊಸ ಲೆಕ್ಕದ ಪಟ್ಟಿಯನ್ನು ಆರಂಭಿಸುತ್ತಾರೆ. ಅದಕ್ಕೆ ಮೊದಲು ಮಹಾಗಣಪತಿಯನ್ನೂ ಮಹಾಲಕ್ಷ್ಮಿಯನ್ನೂ ಪೂಜಿಸುತ್ತಾರೆ. ಇದರ ಜೊತೆಗೆ ಅನೇಕ ಧಾರ್ಮಿಕ ಕಾರ್ಯಕ್ರಮಗಳು ಅಲ್ಲಿ ನಡೆಯುತ್ತವೆ. ಪಶು – ಪಕ್ಷಿಗಳಿಗೆ ಕಾಳು ಹಾಕುವುದಲ್ಲದೆ ಮುಂದಿನ ಮಳೆಗಾಲದ ಮುನ್ಸೂಚನೆಯನ್ನೂ ಅವುಗಳ ಮೂಲಕ ರೈತರು ಪಡೆದುಕೊಳ್ಳುತ್ತಾರೆ.

ಒಟ್ಟಿನಲ್ಲಿ ಅಕ್ಷಯ ತೃತೀಯೆ ಒಂದು ಧಾರ್ಮಿಕ ದಿನ. ಯಾವುದೇ ದಿನ ದಾನ – ಹೋಮಾದಿಗಳನ್ನು ಮಾಡಿದರೂ ಅದು ಪುಣ್ಯಕರವೇ ಆದರೂ ಈ ದಿನ ಅದು ಅನಂತ ಫಲವನ್ನು ಕೊಡುವುದರಿಂದ ಹೆಚ್ಚು ಶ್ರದ್ಧೆಯಿಂದ ಅದನ್ನು ಮಾಡಬೇಕು. ಇದು ಧಾರ್ಮಿಕವಾಗಿರುವಂತೆ ಪರಿಸರ ಅಥವಾ ಪರ್ಯಾವರಣಕ್ಕೂ ಸಂಬಂಧಿಸಿದ ದಿನ. ಈ ದಿನ ಗಿಡಗಳನ್ನು ನೆಡುವುದಕ್ಕೆ ಅತ್ಯಂತ ಪ್ರಶಸ್ತವಾಗಿದೆ. ಕಡು ಬೇಸಿಗೆಯ ದಿನವಾಗಿರುವುದರಿಂದ ಪ್ರಪಾದಾನ ಧಾನ್ಯ ದಾನ ಮುಂತಾದವುಗಳಿಂದ ವಿಶ್ವಾತ್ಮನನ್ನು ಆರಾಧಿಸುವುದೇ ಈ ದಿನದ ಮಹತ್ತ್ವವಾಗಿದೆ.



# ಅಧ್ಯಕ್ಷರ ನುಡಿ

**ಆತ್ಮೀಯ ವಿಪ್ರ ಬಾಂಧವರಿಗೆ ನಮಸ್ಕಾರಗಳು,**

ವಿಪ್ರ ಸಮಾಜದ ಹಿರಿಯ ಸಂಘಟನಾಕಾರ, ಮಹಾಸಭೆಯ ಉಪಾಧ್ಯಕ್ಷ ಹೊ.ನಾ. ಹಿರಿಯಣ್ಣಸ್ವಾಮಿಯವರ ನಿಧನದಿಂದ ಮಹಾಸಭೆಯು ಅಕ್ಷರಶಃ ಬಡವಾಗಿದೆ. ಮಹಾಸಭೆಯ ಆರಂಭದಿಂದಲೂ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರವರು. ಪ್ರಥಮ ಅಧ್ಯಕ್ಷರಾದ ಮಾ॥ ಹಿರಣ್ಣಯ್ಯನವರಾದಿಯಾಗಿ ನನ್ನವರೆಗೂ ಎಲ್ಲಾ ಅಧ್ಯಕ್ಷರ ಜೊತೆಗೂ ಮಹಾಸಭೆಯ ಸಂಘಟನಾ ಕಾರ್ಯ ಮಾಡಿದವರಲ್ಲಿ ಪ್ರಮುಖರಾಗಿದ್ದಾರೆ. ಮಹಾಸಭೆ ನಡೆಸಿದ ಹಲವಾರು ವಿಶೇಷ ಕಾರ್ಯಕ್ರಮಗಳು ಹಾಗೂ ಸಮ್ಮೇಳನಗಳ ಯಶಸ್ವಿಯಲ್ಲಿಕೂಡ ಹಿರಿಯಣ್ಣಸ್ವಾಮಿಯವರ ಪಾತ್ರ ಹಿರಿದಾಗಿತ್ತು. ಅನಿವಾರ್ಯ ಸಂದರ್ಭದಲ್ಲಿ ನಾನು ಮಹಾಸಭೆಯ ಹಂಗಾಮಿ ಅಧ್ಯಕ್ಷನಾಗಲು ಕಾರಣಕರ್ತರಲ್ಲಿ ಹಿರಿಯಣ್ಣಸ್ವಾಮಿಯವರು ಮುಖ್ಯರಾಗಿದ್ದಾರೆ ನಂತರ ನಾನು ಮಹಾಸಭೆಯ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಹುರಿದುಂಬಿಸಿದ್ದನ್ನು ಹಾಗೂ ಚುನವಣೆ ಸಂದರ್ಭದಲ್ಲಿ ರಾಜ್ಯಾಂದಂತ ಪ್ರವಾಸ ಮಾಡಿ ನನ್ನ ಗೆಲುವಿಗೆ ಶ್ರಮಿಸಿದ್ದನ್ನು ನಾನು ಕೃತಜ್ಞತೆಯಿಂದ ನೆನೆಯುತ್ತೇನೆ. ನಾನು ಮಹಾಸಭೆಯ ಅಧ್ಯಕ್ಷನಾದ ನಂತರವು ಕೂಡ ದುಸ್ಥಿತಿಯಲ್ಲಿದ್ದ ಮಹಾಸಭೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಹಾಗೂ ಸ್ಥಗಿತಗೊಂಡಿದ್ದ ಮಹಾಸಭೆಯ ಎಲ್ಲಾ ಕಾರ್ಯಚಟುವಟಿಕೆಗಳನ್ನು ಪುನರಾರಂಭಿಸಲು ಕೈಗೊಳ್ಳಬೇಕಾದ ಕಾರ್ಯಚಟುವಟಿಕೆಗಳ ರೂಪರೇಶೆಯ ತಯಾರಿಯಲ್ಲಿಕೂಡ ಹಿರಿಯಣ್ಣಸ್ವಾಮಿಯವರ ಮಾರ್ಗದರ್ಶನ, ಸಲಹೆ, ಸಹಕಾರವನ್ನು ಸ್ಮರಿಸಿಕೊಳ್ಳುತ್ತೇನೆ.

ಹಿರಿಯಣ್ಣಸ್ವಾಮಿ ನಿಧನಕ್ಕೆ ರಾಜ್ಯಾದ್ಯಂತ ಸಮಾಜದ ಹಲವು ಸಂಘ ಸಂಸ್ಥೆಗಳು ಸಂತಾಪಸೂಚಕ ಸಭೆಗಳನ್ನು ನಡೆಸಿ ವಿಪ್ರ ಸಮಾಜಕ್ಕೆ ಅವರು ಸಲ್ಲಿಸಿದ ಕೊಡುಗೆಯನ್ನು ಕೊಂಡಾಡಿ ಅವರ ಆತ್ಮವು ಸದ್ಗತಿಹೊಂದಲೆಂದು ಪ್ರಾರ್ಥಿಸಿರುವ ವರದಿಗಳು ರಾಜ್ಯದ ಎಲ್ಲಾ ಕಡೆಯಿಂದ ಬರುತ್ತಿರುವುದು ಅವರ ಜನಪ್ರಿಯತೆ ಹಾಗೂ ಸಮಾಜಮುಖಿ ಸೇವೆಗೆ ಸಾಕ್ಷಿಯಾಗಿದೆ.

ಮಹಾಸಭೆಯ ಸಂಘಟನೆ ರಾಜ್ಯಾದ್ಯಂತ ವ್ಯಾಪಿಸಿ ಸಮಸ್ತ ವಿಪ್ರರ ದನಿಯಾಗಬೇಕೆಂಬ ಅವರ ಕನಸನ್ನು ನನಸು ಮಾಡುವುದೇ ಅವರಿಗೆ ಅರ್ಪಿಸಬೇಕಾದ ನಿಜವಾದ ಶ್ರದ್ಧಾಂಜಲಿಯಾಗಿದೆ. ಈ ದಿಸೆಯಲ್ಲಿ ನಾವೆಲ್ಲರು ನಮ್ಮ ಶಕ್ತಿ ಮೀರಿ ಶ್ರಮಿಸಿ ಸಂಘಟನೆಯನ್ನು ಸದೃಢ ಸಮೃದ್ಧ ಸಂಘಟನೆಯನ್ನಾಗಿ ಬಲಗೊಳಿಸಲು ಪ್ರಾಮಾಣಿಕವಾಗಿ ಶ್ರಮಿಸುವ ಮೂಲಕ ಅವರಿಗೆ ಶ್ರದ್ಧಾಂಜಲಿ ಅರ್ಪಿಸೋಣ.

ಈ ತಿಂಗಳಲ್ಲಿ ಸನಾತನ ಧರ್ಮದ ಪುನರುದ್ಧಾರಕರಾದ ಶ್ರೀ ಶಂಕರಾಚಾರ್ಯರು ಹಾಗೂ ಭಗವಂತನ ಎದುರಿನಲ್ಲಿ ಸರ್ವರು ಸಮಾನರು ಎಂದು ಸಾರಿದ ಶ್ರೀ ರಾಮಾನುಜಾಚಾರ್ಯರ ಜನ್ಮದಿನದ ಆಚರಣೆಗಳನ್ನು ಆಯಾ ಸಂಪ್ರದಾಯದ ಮಠಗಳಲ್ಲಿ ಹಾಗೂ ಸಮಾಜದ ಸಂಘ ಸಂಸ್ಥೆಗಳು ನಡೆಸಿರುವ ಬಗ್ಗೆ ರಾಜ್ಯದ ಎಲ್ಲಾ ಕಡೆಯಿಂದ ವರದಿಗಳು ಬರುತ್ತಿರುವುದು ಸಂತಸದ ಸಂಗತಿ. ಆಚಾರ್ಯದ್ವಯರು ಪ್ರಚುರು ಪಡಿಸಿದ ತತ್ವ ಸಿದ್ಧಾಂತಗಳನ್ನು ಮತ್ತೆ ಮತ್ತೆ ಸ್ಮರಿಸಿಕೊಳ್ಳಲು ತನ್ಮೂಲಕ ನಮ್ಮ ನಿತ್ಯ ಜೀವನದಲ್ಲಿ ಅವುಗಳನ್ನು ಅಳವಡಿಸಿಕೊಂಡು ಜೀವನ ಸಾಫಲ್ಯದ ಕಡೆ ನಡೆದರೆ ಈ ಆಚರಣೆಗಳು ಸಾರ್ಥಕವಾಗುತ್ತವೆ. ಇಲ್ಲದ್ದಿದರೆ ಕೇವಲ ಬಾಹ್ಯ ಆಚರಣೆಗೆ ಸೀಮಿತವಾಗಿ ಸಮಾಜಕ್ಕಾಗಲೀ, ವ್ಯಕ್ತಿಗಳಿಗಾಗಲಿ ಯಾವ ಪ್ರಯೋಜನವಾಗದು. ಈ ಅರಿವಿನೊಂದಿಗೆ ಆಚಾರ್ಯರು ನೀಡಿದ ಸಂದೇಶ ಜೀವನಾದರ್ಶಗಳನ್ನು ಮುಂದಿನ ಪೀಳಿಗೆ ಪರಿಚಯಿಸುವ ರೀತಿಯಲ್ಲಿ ಜಯಂತಿಗಳನ್ನು ಆಚರಿಸಿದರೆ ಅರ್ಥಪೂರ್ಣವಾಗುತ್ತದೆ, ಸಾರ್ಥಕವಾಗುತ್ತದೆ.

ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಪರೀಕ್ಷಾ ಫಲಿತಾಂಶಗಳು ಪ್ರಕಟವಾಗಿದ್ದು ಎಂದಿನಂತೆ ವಿಪ್ರ ಸಮಾಜದ ವಿದ್ಯಾರ್ಥಿಗಳು ಸಾವಿರ ಸಾವಿರ ಸಂಖ್ಯೆಗಳಲ್ಲಿ ಉನ್ನತ ಶ್ರೇಣಿಯನ್ನು ಪಡೆದಿರುವುದು ಅಭಿಮಾನ ಪಡುವ ಸಂಗತಿ. ಸರ್ಕಾರದ ಸವಲತ್ತಿನಿಂದ ವಂಚಿತರಾಗಿರುವ ನಮ್ಮ ಸಮಾಜಕ್ಕೆ ವಿದ್ಯೆಯೊಂದೆ ಆಸ್ತಿ ಹಾಗೂ ದಾರಿ ದೀಪ. ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದರೂ ಮಿಸಲಾತಿ ಕಾರಣದಿಂದಾಗಿ ಪ್ರತಿಭೆಗೆ ಮನ್ನಣೆ ಸಿಗದೆ ವಿದ್ಯಾರ್ಥಿಗಳು ಹತಾಶರಾಗದೆ ಇರುವ ಅವಕಾಶವನ್ನು ಉಪಯೋಗಿಸಿ ವಿದ್ಯಾಭ್ಯಾಸ ಮುಂದುವರಿಸಬೇಕಾಗಿದೆ. ಇದಕ್ಕಾಗಿ ವಿಪ್ರ ಸಮಾಜಕ್ಕೆ ಸೇರಿದ ಶಿಕ್ಷಣ ಸಂಸ್ಥೆಗಳು ವಿಷೇಶ ರಿಯಾಯಿತಿ ನೀಡುವ ಮೂಲಕ ನಮ್ಮ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಬೇಕು. ಹಾಗೂ ಸಮಾಜದ ಸಂಘ ಸಂಸ್ಥೆಗಳು, ಉದ್ಯಮಿಗಳು, ಉನ್ನತ ಸ್ಥಾನದಲ್ಲಿರುವರು ಆರ್ಥಿಕವಾಗಿ ದುರ್ಬಲರಾದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವ ಮೂಲಕ ಪ್ರತಿಭಾವಂತರನ್ನ ವಿದ್ಯಾಭ್ಯಾಸದಿಂದ ವಂಚಿತರಾಗದಂತೆ ನೋಡಿಕೊಳ್ಳುವ ಜವಬ್ದಾರಿಯನ್ನು ತೋರಿಸಬೇಕಾಗಿದೆ. ಮಹಾಸಭೆಯು ಕೂಡ ಈ ನಿಟ್ಟಿನಲ್ಲಿ ನಿರ್ದಿಷ್ಟ ಯೋಜನೆಗಳನ್ನು ಹಾಕಿಕೊಳ್ಳಬೇಕಾಗಿದೆ ಈ ದಿಸೆಯಲ್ಲಿ ಸಮಾಜದ ಉದ್ಯಮಿಗಳು ಹಾಗೂ ಉಳ್ಳವರು ವಿದ್ಯಾರ್ಥಿ ವೇತನ ನಿಧಿಗೆ ಉದಾರ ದೇಣಿಗೆ ನೀಡಲು ಮುಂದೆ ಬರಬೇಕೆಂದು ವಿನಂತಿಸುತ್ತೇನೆ.

ವಂದನೆಗಳೊಂದಿಗೆ,

**ಅಶೋಕ ಹಾರನಹಳ್ಳಿ,**
ಅಧ್ಯಕ್ಷರು,

# ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ನಮಸ್ಕಾರ. ಭಾರತೀಯ ಸಂಪ್ರದಾಯದಲ್ಲಿ ಚೈತ್ರ ಮಾಸದಲ್ಲಿ ಚಾಂದ್ರಮಾನ ಯುಗಾದಿ, ಸೌರಮಾನ ಯುಗಾದಿ, ಶ್ರೀರಾಮ ನವಮಿ, ಮಹಾವೀರ ಜಯಂತಿ, ಕರಗ ಮುಂತಾದುವನ್ನು ಆಚರಿಸಿದರೆ ವೈಶಾಖ ಮಾಸದಲ್ಲಿ ಅಕ್ಷಯ ತೃತೀಯ, ಬಸವ ಜಯಂತಿ, ಶ್ರೀ ಆದಿಶಂಕರಾಚಾರ್ಯ ಶ್ರೀ ರಾಮಾನುಜ ಜಯಂತಿ, ವಾಸವಾಂಬ, ಶ್ರೀ ನಿಮಿಷಾಂಬಾ–ನೃಸಿಂಹ ಜಯಂತಿ ಹಾಗೂ ಬೌದ್ಧ ಪೂರ್ಣಿಮೆಯನ್ನು ಆಚರಿಸುತ್ತಾರೆ.

ಆದಿ ಶಂಕರಾಚಾರ್ಯರು ಸಾಕ್ಷಾತ್ ಕೈಲಾಸಪತಿ ಶಂಕರನ ಅಂಶಾವತಾರ. ಶ್ರೀ ರಾಮಾನುಜಾಚಾರ್ಯರು ವೈಕುಂಠಪತಿ ನಾರಾಯಣನ ಶಯ್ಯಾಸನವಾದ ಆದಿಶೇಷನ ಅವತಾರ. ಮಧ್ವಾಚಾರ್ಯರು ವಾಯುದೇವನ ಅವತಾರ. ಇವರ ಅವತಾರಗಳೆಲ್ಲವೂ ಧರ್ಮ ಸಂಸ್ಥಾಪನೆಗಾಗಿ ನಡೆದಿದ್ದು.

ಶ್ರೀ ಶಂಕರರು ಪರಮಾತ್ಮನ ಆತ್ಮತ್ವವನ್ನೂ, ಏಕಾತ್ಮವಾದವನ್ನು, ಶ್ರೀ ರಾಮಾನುಜರು ಆತ್ಮ–ಪರಮಾತ್ಮಗಳ ಆತ್ಮೀಯ ಸೇವೆಯನ್ನು, ಶ್ರೀ ಮಧ್ವರು ಆತ್ಮ–ಪರಮಾತ್ಮಗಳ ಅಖಂಡ ಪ್ರಭಾವಗಳ್ನು ತೋರಿಸಿಕೊಟ್ಟು ಜ್ಞಾನ–ಕರ್ಮ–ಭಕ್ತಿ–ಯೋಗ ಮಾರ್ಗಗಳ ಹಿನ್ನೆಲೆಯಲ್ಲಿ ಸಮಾಜವನ್ನು ಒಗ್ಗೂಡಿಸಿದರು. ನಮ್ಮ ದೇಶದ ಐಕ್ಯತೆ, ಸಮಗ್ರತೆ, ಅಖಂಡತೆ, ಅನ್ಯೋನ್ಯತೆಗಳಿಗೆ ತಮ್ಮ ಸಂಪೂರ್ಣ ಜೀವನವನ್ನು ಸ್ವಾರ್ಥರಹಿತವಾಗಿ ಧಾರೆ ಎರೆದರು. ಮಳೆ ಚೆನ್ನಾಗಿ ಬಂದರೆ ಭೂಮಿಯ ಒಳಗಿರುವ ಬೀಜಗಳು, ಗಿಡಬಳ್ಳಿ–ಮರಗಳು ಮತ್ತೆ ಚಿಗುರಿ ಸಮೃದ್ಧಿಯಾಗುವಂತೆ, ಧರ್ಮ ಸಂಸ್ಥಾಪನೆಯ ಮೂಲಕ ದೇಶದ ಎಲ್ಲಾ ಸಮಸ್ಯೆಗಳು ಸಲೀಸಾಗಿ ಪರಿಹಾರವಾಗುತ್ತದೆ. ರಾಷ್ಟ್ರವು ಸಮೃದ್ಧಿ, ಸಂತೃಪ್ತಿ–ಶಾಂತಿಗಳಿಂದ ಕೂಡಿ ಸುಖಮಯವಾಗಿರುವುದು ಎಂದು ಭಾವಿಸಿ ಶ್ರಮಿಸಿದರು. ಇದೇ ಭಗವಂತನ ಮತ್ತು ಆಚಾರ್ಯರ ಅವತಾರಗಳ ಉದ್ದೇಶ.

ಆದಿಶಂಕರಾಚಾರ್ಯರ ಕಾಲದಲ್ಲಿ ಭಾರತದಲ್ಲಿ ತುರುಷ್ಕರ ಆಕ್ರಮಣಕ್ಕೆ ಬೌದ್ಧರ ಆತ್ಮರಹಿತವಾದವು (ನೈರಾತ್ಮ್ಯವಾದವು) ಬಹಳ ಅನುಕೂಲವಾಗಿತ್ತು. ಆತ್ಮದ ಅಸ್ತಿತ್ವವನ್ನು ನಿರಾಕರಿಸಿದರೆ, ಆ ಆತ್ಮವು ಶರೀರದ ಮೂಲಕ ನಡೆಸುವ ಧರ್ಮಕಾರ್ಯಗಳಿಗೆ ಅವಶ್ಯಕತೆಯೇ ಇರುವುದಿಲ್ಲ. ಆದ್ದರಿಂದ ಬೌದ್ಧರ ನೈರಾತ್ಮ್ಯವಾದವು ಭಾರತೀಯರ ಎಲ್ಲಾ ಧರ್ಮಗಳಿಗೂ ವಿನಾಶಕಾರಿಯಾಗಿತ್ತು. ಅದು ಶುದ್ಧ ನಾಸ್ತಿಕವಾದವಾಗಿತ್ತು. ಈ ಆತಂಕ ಆಧ್ಯಾತ್ಮಿಕ ದುರಂತವನ್ನು ಮೊದಲಿಗೆ ತಪ್ಪಿಸಿದವರು ಶಂಕರಾಚಾರ್ಯರು. ಕರ್ಮಕಾಂಡದ ಕುಮಾರಿಲ ಭಟ್ಟರು ಮತ್ತು ಜೈನ ಮುನಿ ಅಕಲಂಕದೇವ. ಈ ಆಚಾರ್ಯತ್ರಯರ ಕೊಡುಗೆ ಬಗ್ಗೆ ವಿಸ್ತೃತವಾದ ಅಧ್ಯಯನವಾಗಬೇಕಾಗಿದೆ. ಧರ್ಮಕ್ಕೆ ಹಲವಾರು ಹೊರ–ಒಳ ರೂಪಗಳಿದ್ದು ಸಮಾಜಕ್ಕೆ, ದೇಶಕ್ಕೆ, ಉಪಕಾರಿಯಾದವು. ಇವು ಇಷ್ಟ–ಪೂರ್ತ ಎಂಬ ಎರಡು ವರ್ಗವನ್ನು ಹೊಂದಿವೆ. ಇಷ್ಟ ಎಂದರೆ ಯಜ್ಞ, ಯಾಗ, ವ್ರತ, ಪೂಜೆ ಮುಂತಾದವು. ‘ಪೂರ್ತ’ ಎಂದರೆ ನೀರಿನ ಆಶ್ರಯಗಳು, ಹಳ್ಳಿ ನಗರಗಳು, ಸಸ್ಯ ಪ್ರಾಣಿ, ಕೋಟೆ–ಕೊತ್ತಲಗಳ ರಕ್ಷಣೆ ಮುಂತಾದವು, ಅಗೋಚರ ಕಾರಣಗಳಿಂದ ಉಂಟಾಗುವ ಬರಗಾಲ, ಕ್ಷಾಮ, ಅಧರ್ಮ ಕಾರ್ಯಗಳನ್ನು ತಡೆಯಲು ಯಜ್ಞ, ಯಾಗ–ದೇವತಾ ಪೂಜಾದಿ ಇಷ್ಟ ಕರ್ಮಗಳನ್ನು, ಸಾಮಾಜಿಕ ಸೇವಾ ರೂಪವಾದ ಪೂರ್ತ ಕರ್ಮಗಳನ್ನು ಜಾರಿಗೊಳಿಸಲಾಯಿತು. ಎರಡನೆಯದಾಗಿ ಆಚಾರ್ಯರು ರಾಜ–ಮಹಾರಾಜರನ್ನು, ಶಿಷ್ಯರನ್ನು, ನಮ್ಮ ಆಧಾತ್ಮಿಕ ಉಪದೇಶದ ಮೂಲಕ ಪರಿವರ್ತಿಸಿ, ಅವರ ಮೂಲಕ ‘ಇಷ್ಟ–ಪೂರ್ತ’ ಸಾಮಾಜಿಕ, ಧರ್ಮಕಾರ್ಯಗಳನ್ನು ಮಾಡಿದರು. ಶ್ರೀ ಶಂಕರಾಚಾರ್ಯರು ಭಾರತದ ಉದ್ದ–ಅಗಲಕ್ಕೂ ಮೂರುಬಾರಿ ಸಂಚರಿಸಿ ಹಲವು ಮತಗಳ ಗೊಂದಲದಲ್ಲಿದ್ದ ಭಾರತೀಯರನ್ನು ಪಾರುಮಾಡಿ, ಎಲ್ಲ ಧರ್ಮಗಳೂ ಒಂದೇ ಉದ್ದೇಶದಿಂದ ಇರಬೇಕೆಂದು ಅದ್ವೈತ ಮತವನ್ನು ಸಾರಿ, ವೈದಿಕ ಸನಾತನ ಧರ್ಮವನ್ನು ಪುನರುಜ್ಜೀವನಗೊಳಿಸಿದ್ದು ಅವರ ಆಧ್ಯಾತ್ಮಿಕ, ಸಾಮಾಜಿಕ ಸೇವೆ, ಜ್ಞಾನಿಗಳಲ್ಲಿ ಮೇಲು–ಕೀಳು, ಜನರಲ್ಲಿ ಬಡವ–ಬಲ್ಲಿದ ಎಂಬ ತಾರತಮ್ಯ ಭಾವನೆಯನ್ನು ದೂರಮಾಡಿ ಜ್ಞಾನಕ್ಕೆ ಪ್ರಾಮುಖ್ಯತೆಯನ್ನು ನೀಡಬೇಕೆಂದು ತಮ್ಮ ನಡೆ–ನುಡಿಗಳ ಮೂಲಕ ಪ್ರದರ್ಶಿಸಿದರು. ಶ್ರೀ ರಾಮಾನುಜಾಚಾರ್ಯರು ಜಾನಪದ ದ್ರಾವಿಡ ವೇದಗಳಿಗೆ ದೇವಾಲಯ ಪೂಜೆಗಳಲ್ಲಿ ಸ್ಥಾನ ನೀಡಿದರು. ಶ್ರೀರಂಗದಲ್ಲಿ ಉಚಿತ ಆರೋಗ್ಯ ಶಾಲೆಯನ್ನು ಸ್ಥಾಪಿಸಿ, ಔಷಧಗಳಿಗೆ ವ್ಯವಸ್ಥೆ ಮಾಡಿದರು. ಪ್ರಾಚೀನ ಪುಣ್ಯ ಕ್ಷೇತ್ರಗಳನ್ನು ಪುನರುಜ್ಜೀವನಗೊಳಿಸಿದರು. ಶಂಕರ ಭಗವತ್ಪಾದರ ಅಂತರಂಗದ ಅದ್ವೈತವನ್ನು ವಿಶಿಷ್ಟ ತತ್ವದೊಂದಿಗೆ ಜೋಡಿಸಿ ಸಮಾಜಕ್ಕೆ ನೀಡಿದರು.

ಶ್ರೀ ಮಧ್ವಾಚಾರ್ಯರು ಹಲವಾರು ಕೂಟಗಳನ್ನು ಸ್ಥಾಪಿಸಿ, ಸಾಮಾನ್ಯದವರಿಗೆ ವೇದಾಂತದ ಅರ್ಥವನ್ನು ಸರಳವಾಗಿ ಬೋಧಿಸಿದರು. ವೈಷ್ಣವರು ಶಿವರಾತ್ರಿ ವ್ರತವನ್ನು ಮಾಡಲು ಪೌರಾಣಿಕ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಿ, ಕಾಲದಲ್ಲಿದ್ದ ಶೈವ–ವೈಷ್ಣವ ವಿರೋಧಗಳನ್ನು ಪರಿಹರಿಸಿದರು. ಖ್ಯಾತ ಸಂಸ್ಕೃತ ವಿದ್ವಾಂಸ, ರಾಷ್ಟ್ರಪ್ರಶಸ್ತಿ ಪುರಸ್ಕೃತ ವಿದ್ವಾನ್ ಅರ್ಯೈಯರ್ ಶ್ರೀರಾಮ ಶರ್ಮಾ ತಿಳಿಸಿದಂತೆ ಆಚಾರ್ಯತ್ರಯರು ರಾಷ್ಟ್ರ ನಿರ್ಮಾಪಕರು, ಧರ್ಮ ಪುನಃಸ್ಥಾಪಕರು. ಇಂದು ಕೆಲವು ಸಮೂಹ ಮಾಧ್ಯಗಳ ಪ್ರಕಟಣೆಗಳಿಂದಾಗಿ, ಕೆಲವು ವಿತಂಡವಾದಿಗಳ ಕುತರ್ಕ ಘೋಷಣೆಗಳಿಂದಾಗಿ, ಮತಾಂಧರಿಂದಾಗಿ ಬ್ರಾಹ್ಮಣ ಸಮಾಜ ವಿಘಟಿತವಾಗುತ್ತಲಿದೆ. ಮಹಾಸಭಾದ ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಹಲವಾರು ಬಹಿರಂಗ ಸಭೆಗಳಲ್ಲಿ ಕರೆಕೊಟ್ಟಂತೆ ಬ್ರಾಹ್ಮಣರೆಲ್ಲರೂ ತಮ್ಮ ಒಳಪಂಗಡಗಳ ಬಗ್ಗೆಯೇ ಚಿಂತಿಸುವ, ಮುಂದುವರಿಸುವ ಬದಲು, ಎಲ್ಲರೂ ಒಟ್ಟಾಗಿ ಕಾರ್ಯನಿರ್ವಹಿಸುವ ಕಾಲ ಸನ್ನಿಹಿತವಾಗಿದೆ. ಆ ದಿಶೆಯಲ್ಲಿ ಇಡೀ ವಿಪ್ರ ಸಮಾಜ ಕಾರ್ಯೋನ್ಮುಖವಾಗಬೇಕಾಗಿದೆ.

ವಂದನೆಗಳೊಂದಿಗೆ,

**ಪ್ರೊ. ಎಂ.ಕೆ. ಶ್ರೀಧರ್**
ಪ್ರಧಾನ ಸಂಪಾದಕರು

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಗಾಯತ್ರಿಭವನ, ಬೆಂಗಳೂರು

# ವಿಪ್ರ ಸಮಾಜದ ಹಿರಿಯಣ್ಣ – ಹೊ.ನಾ. ಹಿರಿಯಣ್ಣಸ್ವಾಮಿಯವರಿಗೆ ಶ್ರದ್ಧಾಂಜಲಿ



ಸಂಘಟನಾತ್ಮಕ ಗುಣಸ್ವಭಾವವನ್ನು ಹೊಂದಿ ಅದರಂತೆ ಹಲವರನ್ನು ಆ ನಿಟ್ಟಿನಲ್ಲಿ ಬೆಳೆಸಿದ ಹೆಗ್ಗಳಿಕೆ ಹೊ.ನಾ ಹಿರಿಯಣ್ಣಸ್ವಾಮಿ ಅವರಿಗೆ ಸಲ್ಲಬೇಕೆಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿರವರು ತಿಳಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕಾರ್ಯಾಲಯದಲ್ಲಿ ದಿನಾಂಕ 24.05.2024ರಂದು ಹಮ್ಮಿಕೊಂಡಿದ್ದ ಹೊ.ನಾ. ಹಿರಿಯಣ್ಣಸ್ವಾಮಿ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, ಹೊ.ನಾ. ಹಿರಿಯಣ್ಣಸ್ವಾಮಿ ಅವರನ್ನು ಬಾಲ್ಯದ ದಿನಗಳಿಂದಲೂ ಗಮನಿಸುತ್ತಿದ್ದೆ. ಪ್ರತಿ ಸಂದರ್ಭದಲ್ಲೂ ಸಾಕಷ್ಟು ಮಂದಿಗೆ ಸಲಹೆ, ಸಹಕಾರವನ್ನು ನೀಡುವ ಜೊತೆಗೆ ಉತ್ತಮ ಮಾರ್ಗದರ್ಶಿಗಳಾಗಿದ್ದರು ಎಂದು ನೆನಪಿಸಿಕೊಂಡರು.

ನನ್ನನ್ನು ಬ್ರಾಹ್ಮಣ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದ್ದೆ ಹಿರಿಯಣ್ಣ ಅವರು ಎಂಬುದನ್ನು ಆತ್ಮವಿಶ್ವಾಸದಿಂದ ಹೇಳುವೆ. ಮಹಾಸಭಾದ ಸಂಘಟನೆ ವಿಚಾರದಲ್ಲಿ ಹಲವು ತರಹದಲ್ಲಿ ಮಾರ್ಗದರ್ಶನ ಮಾಡುತ್ತಾ, ಸಾಕಷ್ಟು ಸಂದರ್ಭಗಳಲ್ಲಿಯೂ ಉತ್ತಮ ಸಹಕಾರ ನೀಡುವ ಮನೋಗುಣವನ್ನು ಬೆಳೆಸಿಕೊಂಡಿದ್ದರು ಎಂಬ ಸಂಗತಿಯನ್ನು ವಿವರಿಸಿದರು.

ಮಹಾಸಭಾದ ಅಧ್ಯಕ್ಷರಾದ ನಂತರ ಅನೇಕ ಕಾರ್ಯಯೋಜನೆಗಳನ್ನು ಕೈಗೊಳ್ಳಲು ಹಿರಿಯಣ್ಣಸ್ವಾಮಿ ಹೆಚ್ಚಿನ ಸಹಕಾರ ನೀಡುತ್ತಾ ಬಂದಿದ್ದರು. ಕರ್ನಾಟಕದ ಮೂಲೆ ಮೂಲೆಯಲ್ಲಿ ಬ್ರಾಹ್ಮಣ ಮಹಾಸಭಾದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲು ಅವರ ಸಲಹೆ, ಮಾರ್ಗದರ್ಶನ ತುಂಬಾ ಅನುಕೂಲವಾಯಿತು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸಂಸ್ಥಾಪಕರಲ್ಲಿ ಒಬ್ಬರಾದ ಪ್ರೊ: ಲಕ್ಷ್ಮೀನಾರಾಯಣ ಭಟ್ಟರವರು ಮಾತನಾಡಿ ಬ್ರಾಹ್ಮಣ ಮಹಾಸಭಾ ಪ್ರಾರಂಭ ಮಾಡಿದಾಗ ಹಿರಿಯಣ್ಣಸ್ವಾಮಿ ನಮ್ಮ ಜೊತೆ ಇದ್ದು ಹೆಚ್ಚಿನ ಸಹಕಾರ ನೀಡಿದರು. ಮಹಾಸಭಾದ ಇಂದಿನವರೆಗೂ ಎಲ್ಲಾ ಅಧ್ಯಕ್ಷರಿಗೆ ಹೆಚ್ಚಿನ ಸಹಕಾರ, ಬೆಂಬಲ ನೀಡುತ್ತಾ ಬಂದಿದ್ದರು. ಮಾಜಿ ಮುಖ್ಯಮಂತ್ರಿಯಾಗಿದ್ದ ಗುಂಡೂರಾವ್ ಅವರಿಗೆ ಆಪ್ತರಾಗಿದ್ದರು. ಜೊತೆಗೆ ಸರ್ಕಾರಗಳೊಂದಿಗೆ ಉತ್ತಮ ಒಡನಾಟ ಹೊಂದಿ ಮಹಾಸಭಾಗೆ ನೆರವು ನೀಡಿಸುವಲ್ಲಿ ಅವರ ಪಾತ್ರ ಬಹಳ ದೊಡ್ಡದು ಎಂದು ತಿಳಿಸಿದರು.

ಕೈಗಾರಿಕೋದ್ಯಮಿ ಎಂ.ವಿ. ಸತ್ಯನಾರಾಯಣರವರು ಮಾತನಾಡಿ ಹಲವರೊಂದಿಗೆ ಆತ್ಮೀಯರಾಗಿರುತ್ತಿದ್ದ ವ್ಯಕ್ತಿ ಹಿರಿಯಣ್ಣಸ್ವಾಮಿ ಸಾಕಷ್ಟು ಮಂದಿ ಜೊತೆ ಉತ್ತಮ ಒಡನಾಟ ಇಟ್ಟುಕೊಂಡಿದ್ದರು. ಬ್ರಾಹ್ಮಣ ಮಹಾಸಭಾದ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದವರು ಎಂದರು.

ಶಾಸಕರಾದ ಎಲ್.ಎ. ರವಿಸುಬ್ರಹ್ಮಣ್ಯ, ಉದಯ್ ಗುರುಡಾಚಾರ್, ಸಿ.ಕೆ. ರಾಮಮೂರ್ತಿ, ಮಹಾಸಭಾ ಪ್ರಧಾನ ಕಾರ್ಯದರ್ಶಿ ಎಸ್. ಶ್ರೀಧರಮೂರ್ತಿ ಹಾಗೂ ಖಜಾಂಚಿ ವಿಸ್. ನಾಯಕ್, ಮಹಾಸಭಾದ ಉಪಾಧ್ಯಕ್ಷರುಗಳಾದ ಹೆಚ್.ಆರ್. ಸುರೇಶ್, ಛಾಯಪತಿ ಸುಧಾಕರ ಬಾಬು, ಹಾಗೂ ಮಾಜಿ ಅಧ್ಯಕ್ಷರುಗಳಾದ ಹೊನ್ನಪ್ಪ, ಡಾ. ಎಂ.ಆರ್.ವಿ. ಪ್ರಸಾದ್ ಸಂಘಟನಾ ಕಾರ್ಯದರ್ಶಿ ಮುರಳೀಧರ್, ಹಿರಿಯ ಮುಖಂಡರಾದ ಎಂ.ಆರ್. ಶಿವಶಂಕರ್, ಎಂ. ನರಸಿಂಹನ್, ಲಕ್ಷ್ಮೀಕಾಂತ, ರಘುನಾಥ್, ಪ್ರೋ. ರಾಧಾಕೃಷ್ಣ, ಶುಭಮಂಗಳ, ಸಾವಿತ್ರಿ ರಮೇಶ್. ತುಮಕೂರಿನ ರಾಘವೇಂದ್ರ,



ಕನಕಪುರದ ಬಾಲಸುಬ್ರಮಣ್ಯ, ಟಿ.ಎಲ್.ಎಸ್. ಕುಮರ್, ಡಿ.ಎನ್. ಸುರೇಶ್, ಮೊದಲಾದವರು ದಿವಂಗತರಿಗೆ ನುಡಿ ನಮನವನ್ನು ಸಲ್ಲಿಸಿದರು ಹಿರಿಯಣ್ಣಸ್ವಾಮಿಯವರ ಸಹೋದರರಾದ ನಾರಾಯಣಸ್ವಾಮಿ ಹಾಗೂ ಅವರ ಪುತ್ರಿ ಶ್ರೀಮತಿ ಮೀರಾ ಹಾಗೂ ಕುಟುಂಬ ಸದಸ್ಯರು ಉಪಸ್ಥಿತರಿದ್ದರು. ಶ್ರೀಮತಿ ಸುಮ ಕಲ್ಯಾಣಿಯವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಸಭೆಯು ಮಹಾಸಭಾ ಖಜಾಂಚಿ ವೆಂಕಟೇಶ್ ಎಸ್. ನಾಯಕ್‌ರವರ ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.



# ಗದಗ್ ಜಿಲ್ಲಾ ಬ್ರಾಹ್ಮಣ ಸಮಾಜದ ವತಿಯಿಂದ ಹೊ.ನಾ. ಹಿರಿಯಣ್ಣಸ್ವಾಮಿಯವರಿಗೆ ಶ್ರದ್ಧಾಂಜಲಿ



ದಿನಾಂಕ 24-5-24 ರಂದು ಗದಗ್‌ದಲ್ಲಿ ಗದಗ್ ಜಿಲ್ಲಾ ಬ್ರಾಹ್ಮಣ ಸಮಾಜದ ವತಿಯಿಂದ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಲಾಗಿತ್ತು.

ನಮ್ಮೆಲ್ಲರ ಹಿರಿಯರು ಮತ್ತು ಸಮಾಜವನ್ನು ಕಟ್ಟಿ ಬೆಳೆಸುವಲ್ಲಿ ಹೆಚ್ಚು ಮುಂಚೂಣಿಯಲ್ಲಿದ್ದು 50 ವರ್ಷಗಳ ಅವಧಿಗೂ ಹೆಚ್ಚು ಕಾಲ ಸಮಾಜ ಸೇವೆ ಮಾಡಿದ ಶ್ರೀ ಹಿರಿಯಣ್ಣ ಸ್ವಾಮಿ ಹಿರಿಯ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರು ಅವರು ಸ್ವರ್ಗಸ್ಥರಾಗಿದ್ದಕ್ಕೆ ಶ್ರದ್ಧಾಂಜಲಿಯನ್ನ ಗದಗ್ ಜಿಲ್ಲೆಯ ಎಲ್ಲ ಪದಾಧಿಕಾರಿಗಳು ಕೂಡಿಕೊಂಡು ಮೌನಾಚರಣೆ ಮಾಡುವವರ ಮೂಲಕ ಅರ್ಪಣೆ ಮಾಡಲಾಯಿತು ಈ ಸಮಯದಲ್ಲಿ ಅವರ ಬಗ್ಗೆ ರಾಜ್ಯ ಸಂಘಟನಾ ಕಾರ್ಯದರ್ಶಿಯಾದ ವಿಜಯ ನಾಡಜೋಶಿ ಮಾತನಾಡಿದರು. ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷರಾದ ವೆಂಕಟೇಶ್ ಕುಲಕರ್ಣಿ ವಹಿಸಿದ್ದರು. ಎಲ್ಲ ಪದಾಧಿಕಾರಿಗಳು ಉಪಸ್ಥಿತರಿದ್ದು ಭಾಗವಹಿಸಿದ್ದರು.

## ಧಾರವಾಡ ಜಿಲ್ಲಾ ಬ್ರಾಹ್ಮಣ ಸಭಾ ವತಿಯಿಂದ ಹಿರಿಯಣ್ಣಸ್ವಾಮಿಯವರಿಗೆ ಶ್ರದ್ಧಾಂಜಲಿ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಹಿರಿಯ ಸದಸ್ಯರು, ಮಾಜಿ ಪ್ರಧಾನ ಕಾರ್ಯದರ್ಶಿಗಳು, ರಾಜ್ಯ ಉಪಾಧ್ಯಕ್ಷರು ಆದ ಶ್ರೀ ಹೊ.ನಾ. ಹಿರಿಯಣ್ಣಸ್ವಾಮಿರವರು ದಿನಾಂಕ 20.05.2024 ರಂದು ವೈಕುಂಠವಾಸಿಯಾಗಿದ್ದು. ಶ್ರೀಯುತರಿಗೆ ಶ್ರದ್ಧಾಂಜಲಿ ಸಭೆಯನ್ನು ಧಾರವಾಡ ಜಿಲ್ಲಾ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ಸಲ್ಲಿಸಲು ದಿನಾಂಕ 22.05.2024 ದಂದು ಭವಾನಿ ನಗರದ ರಾಯರ ಮಠದ ಆವರಣದ ಕಲ್ಯಾಣ ಮಂಟಪದಲ್ಲಿ **"ಶ್ರದ್ಧಾಂಜಲಿ ಸಭೆ"**ಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಹಿರಿಯ ಬ್ರಾಹ್ಮಣ ಮುಖಂಡರು ರಾಜ್ಯ ಉಪಾಧ್ಯಕ್ಷರುಗಳಾದ ಶ್ರೀಯುತ ಹೆಚ್.ವಿ. ಡಂಬಳ್, ಎ.ಸಿ. ಗೋಪಾಲ್, ವೀಣಾ ಹೆಗಡೆ. ಜಿಲ್ಲಾಧ್ಯಕ್ಷರಾದ ಪುರೋಹಿತ್. ಸುನಿಲ್ ಗುಮ್ಮಸ್ತೆ, ಮನೋಹರ ಪಾರ್ವತಿ. ಶಂಕರ್ ಪಾಟೀಲ್. ರಾಘವೇಂದ್ರ ಗೊಗ್ಗಿ. ಮಂಜುಳ ಹಲ್ಯಾಳ್. ಪ್ರಾಣೇಶ್ ಕುಲಕರ್ಣಿ. ವಿ.ಎಸ್. ಕುಲಕರ್ಣಿ. ಮುಂತಾದವರು ಉಪಸ್ಥಿತರಿದ್ದರು.

## ಚಿಂತಾಮಣಿಯಲ್ಲಿ ಹೊ.ನಾ. ಹಿರಿಯಣ್ಣಸ್ವಾಮಿಯವರಿಗೆ ಶ್ರದ್ಧಾಂಜಲಿ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಹಿರಿಯ ಸದಸ್ಯರು,ಮಾಜಿ ಪ್ರಧಾನ ಕಾರ್ಯದರ್ಶಿಗಳು, ರಾಜ್ಯ ಉಪಾಧ್ಯಕ್ಷರು ಆದ ಶ್ರೀ ಹೊ.ನಾ. ಹಿರಿಯಣ್ಣಸ್ವಾಮಿರವರಿಗೆ ಚಿಂತಾಮಣಿ ತಾಲ್ಲೂಕು ಬ್ರಾಹ್ಮಣ ಮಹಾಸಭಾ ವತಿಯಿಂದ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯಲ್ಲಿ ತಾಲ್ಲೂಕು ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಎನ್ ಕೃಷ್ಣ , ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸದಸ್ಯರಾದ ಸಿ.ಎನ್. ನಾಗೇಶ್ ಮತ್ತು ರವಿಪ್ರಕಾಶ್ , ಚಿಂತಾಮಣಿ ತಾಲ್ಲೂಕು ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರಾದ ಸುಜಯಾ ಶ್ರೀನಾಥ್, ಕಾರ್ಯದರ್ಶಿಗಳಾದ ಲಕ್ಷ್ಮಪ್ಪ, ಖಜಾಂಚಿ ಮಲ್ಲಿಕಾರ್ಜುನ ಮತ್ತು ತಾಲ್ಲೂಕಿನ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

### ಮಲ್ಲೇಶ್ವರಂ ಬ್ರಾಹ್ಮಣ ಸಭಾ ಟ್ರಸ್ಟ್ – ಶ್ರೀ ಶಂಕರ ಜಯಂತಿ ಆಚರಣೆ

## ಶ್ರೀ ಶಂಕರರು ಮನುಕುಲಕ್ಕೆ ನೀಡಿದ ಕೊಡುಗೆ ಅಪಾರ

– ಅಶೋಕ ಹಾರನಹಳ್ಳಿ



ಜೀವನದ ಉದ್ದೇಶವನ್ನು ಮನುಕುಲಕ್ಕೆ ತಿಳಿಸಿಕೊಟ್ಟಂತಹ ಹೆಗ್ಗಳಿಕೆ ಶಂಕರಾಚಾರ್ಯರಿಗೆ ಸಲ್ಲುತ್ತದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿಯವರು ತಿಳಿಸಿದರು.

ಮಲ್ಲೇಶ್ವರಂ ಬ್ರಾಹ್ಮಣ ಸಭಾ ಟ್ರಸ್ಟ್ ವತಿಯಿಂದ ಬಡಗನಾಡು ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಶ್ರೀ ವೇದಮಾತೆ ಗಾಯತ್ರಿ, ಶ್ರೀ ಶಂಕರಾಚಾರ್ಯರ ಹಾಗೂ ಶ್ರೀ ರಾಮಾನುಜಾಚಾರ್ಯರ ಜಯಂತ್ಯುತ್ಸವಗಳ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಜೀವನದ ನಂತರದ ಸ್ವರ್ಗ, ನರಕಗಳಿಗಿಂತ ಬಹುಮುಖ್ಯವಾಗಿ ವ್ಯಕ್ತಿ ಜೀವನದಲ್ಲಿ ತಾನಂದುಕೊಂಡ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತ, ತಮ್ಮದೇ ವೈಶಿಷ್ಟ್ಯವನ್ನು ಮೈಗೂಡಿಸಿಕೊಳ್ಳುವುದು ಅಗತ್ಯ. ಜೊತೆಗೆ ಜೀವನವನ್ನು ಸಾರ್ಥಕಪಡಿಸಿಕೊಳ್ಳುವ ನಿಟ್ಟಿನಲ್ಲಿ ನಮ್ಮ ಆಲೋಚನೆಗಳು ಸದಾ ಸಕಾರಾತ್ಮಕವಾಗಿರಬೇಕು ಎಂಬ ಮಹತ್ವದ ಅಂಶವನ್ನು ತಿಳಿಸಿಕೊಟ್ಟ ಶಂಕರಾಚಾರ್ಯರ ಆದರ್ಶಗಳು ಇಂದಿಗೂ ಪ್ರಸ್ತುತ. ಅವರು ಭಕ್ತಿಪಂಥಕ್ಕೆ ಒಂದು ವಿಭಿನ್ನ ತಳಪಾಯವನ್ನು ಹಾಕಿಕೊಟ್ಟರು. ತದನಂತರ ಬಂದಂತಹ ಆಚಾರ್ಯರುಗಳಿಗೆ ಇದು ಮಾದರಿಯಾಯಿತು ಎಂದು ಹೇಳಿದರು.

ಶ್ರೀ ನರೇಂದ್ರ ಮೋದಿಯವರು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಬದಲಾವಣೆಗಳನ್ನು ತರುತ್ತಿದ್ದಾರೆ. ಅದರಲ್ಲೂ ದೇಶೀಯವಾಗಿ ಜೊತೆಗೆ ಪ್ರಾಪಂಚಿಕವಾಗಿ ಹಿಂದೂಗಳಲ್ಲಿ ತಮ್ಮ ಧರ್ಮದ ಬಗ್ಗೆ ಅಭಿಮಾನ ಬೆಳೆಸಿಕೊಳ್ಳುವಂತೆ ಮಾಡಿದರು. ಹಿಂದೂ ಧರ್ಮದ ಬಗ್ಗೆ ಗೌರವವನ್ನು ತಂದುಕೊಡುವಂತಹ ಸಾಕಷ್ಟು ಕೆಲಸ ಕಾರ್ಯಗಳನ್ನು ಮಾಡಿದರು ಎಂದರು. ಪ್ರಸ್ತುತ ಯಾವುದೇ ವ್ಯಕ್ತಿ ಕೆಲ ಸಂದಿಗ್ಧ ಪರಿಸ್ಥಿತಿಯಲ್ಲಿ ಅನೇಕ ಯೋಚನೆಗಳನ್ನು ಮಾಡುವ ಮೂಲಕ ಖಿನ್ನತೆಗೆ ಒಳಗಾಗುವುದು ಸಾಮಾನ್ಯವಾಗಿದೆ. ಇದು ಕೆಲವು ಸಂದರ್ಭದಲ್ಲಿ ರೋಗಗಳಿಗೂ ಕಾರಣವಾಗುತ್ತದೆ. ಹಾಗಾಗಿ ವ್ಯಕ್ತಿಗೆ ಧ್ಯಾನ, ಪೂಜೆ, ನಿಷ್ಠೆ ಇವುಗಳು ಅತ್ಯುತ್ತಮ ಆರೋಗ್ಯ ಹಾಗೂ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಹಕಾರ ನೀಡುತ್ತವೆ. ಗಾಯತ್ರಿ ಮಂತ್ರ ಕೂಡ ಬಹುಮುಖ್ಯವಾದದ್ದು ಎಂಬುದನ್ನು ಮರೆಯುವಂತಿಲ್ಲ. ಗಾಯತ್ರಿ ಮಂತ್ರಕ್ಕೆ ತನ್ನದೇ ಆದ ಆದಮ್ಯ ಶಕ್ತಿ ಇದ್ದು ಅದರಲ್ಲಿರುವ ವೈಶಿಷ್ಟ್ಯವನ್ನು ಅರ್ಥೈಸಿಕೊಳ್ಳಲು ಮುಂದಾಗಬೇಕು. ಗಾಯತ್ರಿ ಮಂತ್ರದ ಪಠಣೆ ವ್ಯಕ್ತಿಗೆ ಪ್ರಜ್ಞಾ ಶಕ್ತಿಯನ್ನು ತಂದುಕೊಡುತ್ತದೆ ಎಂದು ತಿಳಿಸಿದರು. ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಅಸಗೋಡು ಜಯಸಿಂಹ ಮಾತನಾಡಿ, "ಶಂಕರಾಚಾರ್ಯರ ತತ್ವ ಆದರ್ಶಗಳು ಎಲ್ಲರಿಗೂ ಮಾದರಿಯುತವಾದದ್ದು, ಅವುಗಳ ಪಾಲನೆ, ಪೋಷಣೆಗೆ ಮುಂದಾಗಬೇಕು. ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ ಬ್ರಾಹ್ಮಣ ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಹೆಚ್ಚಿನ ಸಹಕಾರ ನೀಡಲಾಗುತ್ತದೆ. ಅಶೋಕ ಹಾರನಹಳ್ಳಿ ಅವರು ಕರ್ನಾಟಕ ಬ್ಯಾಂಕ್ ಆಡಳಿತ ಮಂಡಳಿಯೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದು, ಅಭಿವೃದ್ಧಿ ಮಂಡಳಿಗೆ ಸಾಲಗಳ ನೆರವನ್ನು ಕೊಡಿಸಲು ಮುಂದಾಗಬೇಕು" ಎಂದು ಮನವಿ ಮಾಡಿದರು.

ಮಲ್ಲೇಶ್ವರಂ ಬ್ರಾಹ್ಮಣ ಸಭಾ ಟ್ರಸ್ಟ್ ಅಧ್ಯಕ್ಷ ಡಾ. ಪಾವಗಡ ಪ್ರಕಾಶರಾವ್ ವಿಶೇಷ ಉಪನ್ಯಾಸ ನೀಡಿದರು. ಮಾಜಿ ಕಾರ್ಪೊರೇಟರ್ ಚಿದಂಬರಮ್, ಮಲ್ಲೇಶ್ವರಂ ಬ್ರಾಹ್ಮಣ ಸಭಾ ಟ್ರಸ್ಟ್ ಕಾರ್ಯದರ್ಶಿ ಎಸ್.ಕೆ. ಕೌಶಿಕ್ ಹಾಗೂ ಇತರರು ಉಪಸ್ಥಿತರಿದ್ದರು.

## ಹಾವೇರಿಯಲ್ಲಿ ಶಂಕರಾಚಾರ್ಯರ ಜಯಂತ್ಯುತ್ಸವ



ನಗರದ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಆದಿ ಶಂಕರಾಚಾರ್ಯರ ಜಯಂತ್ಯುತ್ಸವವನ್ನು ಜಿಲ್ಲಾಡಳಿತದಿಂದ ಭಾನುವಾರ ಸರಳವಾಗಿ ಆಚರಿಸಲಾಯಿತು.

ಅಪರ ಜಿಲ್ಲಾಧಿಕಾರಿ ವೀರಮಲ್ಲಪ್ಪ ಪೂಜಾರ ಶಂಕರಾಚಾರ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಆರ.ವಿ. ಚಿನ್ನಿಕಟ್ಟಿ, ಬ್ರಾಹ್ಮಣ ಸಮಾಜದ ಜಿಲ್ಲಾಧ್ಯಕ್ಷ ವಸಂತ ಮೊಕ್ತಾಲಿ, ಸಮಾಜದ ಮುಖಂಡರಾದ ರಮೇಶ ಕಡಕೋಳ, ಎಂ.ಜಿ. ಪಾಟೀಲ, ರಮೇಶ ಕುಲಕರ್ಣಿ, ಸುರೇಶ ಕಡಕೋಳ, ಆರ್.ಆರ್. ಪಾಟೀಲ, ದೀಪಾ ಕಳ್ಳಿಹಾಳ, ಲತಾ ಸಂಕಣ್ಣವರ ಸೇರಿದಂತೆ ವಿವಿಧ ಇಲಾಖಾ ಅಧಿಕಾರಿಗಳು, ಸಿಬ್ಬಂದಿ, ಸಮಾಜದ ಮುಖಂಡರು ಭಾಗವಹಿಸಿದ್ದರು.

# ಶಿವಮೊಗ್ಗದಲ್ಲಿ ಶ್ರೀ ಶಂಕರ ಜಯಂತಿ ಆಚರಣೆ



ಶಿವಮೊಗ್ಗ ಜಿಲ್ಲಾ ಬಬ್ಬೂರು ಕಮ್ಮೆ ಸಂಘದಿಂದ ಶಂಕರ ಜಯಂತಿಯನ್ನು ಆಚರಿಸಲಾಯಿತು. ಸಂಘದ ಗೌರವಾಧ್ಯಕ್ಷರಾದ ಎಸ್ ನಾಗೇಶ್, ಅಧ್ಯಕ್ಷರಾದ ಕಾರ್ಕೂಡ್ಲು ಗುರುಮೂರ್ತಿ, ಉಪಾಧ್ಯಕ್ಷರಾದ ಶಂಕರ್ ಮೂರ್ತಿ, ಖಜಾಂಚಿಯಾದ ಕೃಷ್ಣಮೂರ್ತಿ, ಸಹಕಾರ್ಯದರ್ಶಿಯಾದ ಲಕ್ಷ್ಮಿ ಶ್ರೀಧರ್, ನಿರ್ದೇಶಕರಾದ ಮಂಗಳ ರಾಮಮೂರ್ತಿ, ಮೈಲಾರಿರಾವ್ ಅನಂತರಾಮ್ ಸತ್ಯನ್ ಹಾಗೂ ಡಾಕ್ಟರ್ ವಿದ್ಯಾಶಂಕರ್ ಅವರುಗಳ ಉಪಸ್ಥಿತಿಯಲ್ಲಿ ಶಂಕರ ಜಯಂತಿಯನ್ನು ಆಚರಿಸಲಾಯಿತು.

# ಶ್ರೀ ಶಂಕರಾಚಾರ್ಯರ ಜಯಂತಿ ಹಾಗೂ ಸಾಮೂಹಿಕ ಉಚಿತ ಉಪನಯನ





ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗಸಂಸ್ಥೆಯಾದ ಬ್ರಾಹ್ಮಣ ಸಂಘ, ದಾಸರಹಳ್ಳಿ ಸಂಸ್ಥೆಯಿಂದ ಇದೇ 12.05.2024ರಂದು ಶ್ರೀ ಶಂಕರಾಚಾರ್ಯರು ಮತ್ತು ಶ್ರೀ ರಾಮಾನುಜಾಚಾರ್ಯರ ಜಯಂತಿ ಅಂಗವಾಗಿ ಸಂಘದ ವತಿಯಿಂದ ವಿಪ್ರಬಾಂಧವರಿಗೆ ಸಾಮೂಹಿಕ ಉಪನಯನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ವೇ॥ಬ್ರ॥ಶ್ರೀ ಗುಂಡಪ್ಪ ಶಾಸ್ತ್ರಿಗಳ ನೇತೃತ್ವದಲ್ಲಿ ವಿಪ್ರ ವಟುಗಳಿಗೆ ಶಾಸ್ತ್ರೋಕ್ತವಾಗಿ ಉಪನಯನವನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು. ಕಾರ್ಯಕ್ರಮಕ್ಕೆ ಸಂಘದ ಸದಸ್ಯರುಗಳು ಮತ್ತು ವಟುಗಳ ಪೋಷಕರು, ಬಂಧುಗಳು ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಹಕಾರ ನೀಡಿದರು. ವಟುಗಳಿಗೆ ಸಂಘದಿಂದ ಋಗ್ವೇದ ಮತ್ತು ಯಜುರ್ವೇದದ ತ್ರಿಕಾಲ ಸಂಧ್ಯಾವಂದನೆ ಪುಸ್ತಕ, ಶ್ರೀ ಗಾಯತ್ರಿ ಜಪದ ವಿವರಣೆಯಿರುವ ಪುಸ್ತಕ ಹಾಗೂ ಗಾಯತ್ರಿ ದೇವಿಯ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಆಗಮಿಸಿದಂತ ವಿಪ್ರಬಾಂಧವರನ್ನು ಕುರಿತು ಸಂಘದ ಅಧ್ಯಕ್ಷರಾದ ಶ್ರೀಧರಮೂರ್ತಿ ಮತ್ತು ಖಜಾಂಚಿಯವರಾದ ಎನ್.ಚಂದ್ರಶೇಖರ್‌ರವರು ಮಾತನಾಡಿ ನಮ್ಮ ಸನಾತನ ಧರ್ಮ, ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ತಮ್ಮೆಲ್ಲರ ಸಹಕಾರದಿಂದ ಮಾತ್ರ ಸಾಧ್ಯ ಎಂದು ಹಿತನುಡಿಗಳನ್ನು ಹೇಳಿದರು. ಈ ಕಾರ್ಯಕ್ರಮವು ಯಶಸ್ವಿಯಾಗಲು ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಲಾಯಿತು.

# ಯಲಹಂಕದಲ್ಲಿ ಶಂಕರ, ರಾಮಾನುಜ ಜಯಂತಿ ಆಚರಣೆ



ಯಲಹಂಕ ತಾಲೂಕು ಬ್ರಾಹ್ಮಣ ಸಂಘದ ವತಿಯಿಂದ ಗಾಯತ್ರಿ ಮಂದಿರದಲ್ಲಿ ದಿನಾಂಕ 12/05/2024ರ ಭಾನುವಾರ ಜಗದ್ಗುರು ಶ್ರೀ ಶಂಕರಾಚಾರ್ಯ ಹಾಗೂ ರಾಮಾಜಾಚಾರ್ಯರ ಜಯಂತ್ಯೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀ ಶಂಕರಾಚಾರ್ಯರ, ಶ್ರೀ ರಾಮಾನುಜಾಚಾರ್ಯರ ಮತ್ತು ಪರಶುರಾಮರ ಭಾವಚಿತ್ರಗಳನ್ನು ಭಜನೆ ನೃತ್ಯ ಹಾಗೂ ಮಂಗಳವಾದ್ಯದೊಂದಿಗೆ ಯಲಹಂಕದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯನ್ನು ನಡೆಸಲಾಯಿತು.

ಸಂಘದ ಅಧ್ಯಕ್ಷ ವೈ.ಜಿ. ವೈದ್ಯನಾಥಶಾಸ್ತ್ರಿ, ಉಪಾಧ್ಯಕ್ಷ ವೈ.ಜಿ. ರಾಘವೇಂದ್ರರಾವ್, ಆರ್. ನಾಗರಾಜ್, ಪ್ರಧಾನ ಕಾರ್ಯದರ್ಶಿ ಎಸ್.ಭೀಮಸೇನಾಚಾರ್ಯ, ಸಹಕಾರ್ಯದರ್ಶಿ ಟಿ.ಎಲ್.ಅರುಣ್ ಕುಮಾರ್, ಖಜಾಂಚಿ ಜಿ.ವಿ. ಪ್ರಭಾಕರ್, ಎಲ್.ಸಂಜೀವರಾವ್ ಹಾಗೂ ಸಂಘದ ಕಾರ್ಯಕಾರಿ ಮಂಡಳಿ ಸದಸ್ಯರು ಮತ್ತು ಯಲಹಂಕ ಹಾಗೂ ಸುತ್ತಮುತ್ತಲ ಎಲ್ಲಾ ವಿಪ್ರಬಾಂಧವರು, ಮಹಿಳಾ ಸಂಘದವರು ಆಗಮಿಸಿ ಗುರುಗಳ ಕೃಪೆಗೆ ಪಾತ್ರರಾದರು.

# ಮಂಗಳೂರಿನಲ್ಲಿ 23ನೇ ವಸಂತ ವೇದ ಶಿಬಿರ



ಅವರು ಕೂಟ ಮಹಾಜಗತ್ತು (ರಿ) ಮಂಗಳೂರು ಅಂಗಸಂಸ್ಥೆಯ ವತಿಯಿಂದ ಮಂಗಳಾದೇವಿ ದೇವಸ್ಥಾನದ ವಠಾರದಲ್ಲಿ ಹಮ್ಮಿಕೊಳ್ಳಲಾದ ಇಪ್ಪತ್ತಮೂರನೆ ವರ್ಷದ ಇಪ್ಪತ್ತು ದಿನಗಳ ವಸಂತ ವೇದ ಶಿಬಿರದ ಸಮಾರೋಪ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಇನ್ನೋರ್ವ ಮುಖ್ಯ ಅತಿಥಿ ಸಿ.ಎ ಚಂದ್ರಮೋಹನ್ "ಮಂತ್ರ ಪಠಣದಿಂದ ಆತ್ಮ ಶುದ್ಧಿಯಾಗಿ ಮನಸ್ಸು ಸದೃಢವಾಗುವುದು. ಶಾಲಾ ಚಟುವಟಿಕೆಗಳಲ್ಲಿ ಏಕಾಗ್ರತೆ ಲಭಿಸಲು ಸಾಧ್ಯ" ಎಂದರು. ಶಿಬಿರದ ಗುರುಗಳಾದ ವಿದ್ವಾಂಸರಾದ ಶ್ರೀಕರ ಭಟ್, ರಾಮಚಂದ್ರ ಭಟ್. ಉಪಾಧ್ಯಕ್ಷರಾದ ರಘುರಾಮ್ ರಾವ್ ಶುಭ ಹಾರೈಸಿದರು. ಮಂಗಳಾದೇವಿ ದೇವಳದ ಆಡಳಿತ ಮೊಕ್ತೇಸರ ಅರುಣ್ ಐತಾಳ್, ಪ್ರಧಾನ ಅರ್ಚಕ ವಾಸುದೇವ ಐತಾಳ್, ಚಕ್ರಪಾಣಿ, ಗೋಪಾಲಣ್ಣ, ಕೃಷ್ಣ ಮೈಯ್ಯ, ಪದ್ಮನಾಭ ಮಯ್ಯ, ಶಿವರಾಂ ರಾವ್ ಅರಿಕೆರೆ, ಕೂಟವಾಣಿ ಸಂಪಾದಕ ಆಡೂರು ಕೃಷ್ಣ ರಾವ್ ಮೊದಲಾದವರು ಉಪಸ್ಥಿತರಿದ್ದರು.

ಸುಮಾರು ಮೂವತ್ತೈದು ಜನ ತ್ರಿಮತಸ್ಥ ಬ್ರಾಹ್ಮಣ ವಟುಗಳು ಶಿಬಿರದ ಸದುಪಯೋಗ ಪಡೆದುಕೊಂಡರು. ಕಾರ್ಯದರ್ಶಿ ಗೋಪಾಲಕೃಷ್ಣ ಮಯ್ಯ ಸ್ವಾಗತಿಸಿ ನಿರೂಪಿಸಿದರು. ಮಹಿಳಾ ವೇದಿಕೆ ಅಧ್ಯಕ್ಷೆ ಸುಮತಿ ಕೊರ್ಯಾ ವಂದಿಸಿದರು.

"ಬ್ರಾಹ್ಮಣರಾದ ನಾವುಗಳು ಆಚಾರ ವಿಚಾರ ಸಂಧ್ಯಾವಂದನಾದಿ ಜಪ ತಪ ಅನುಷ್ಠಾನಗಳನ್ನು ಮಾಡಿಕೊಂಡು ಸಮಾಜದಲ್ಲಿ ಸುಸಂಸ್ಕೃತ ಮನುಷ್ಯರಾಗಿ ಬಾಳಬೇಕು. ಹುಟ್ಟಿನಿಂದ ಸಾವಿನ ತನಕ ಷೋಡಶ ಸಂಸ್ಕಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಅವುಗಳನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸಬೇಕು. ಹಾಗಾದಾಗ ಮಾತ್ರ ಧಾರ್ಮಿಕ ಪ್ರಜ್ಞೆ ಜಾಗೃತವಾಗಲು ಸಾಧ್ಯ" ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ದಕ್ಷಿಣ ಕನ್ನಡ ಜಿಲ್ಲೆ ಇದರ ಪ್ರಧಾನ ಸಂಚಾಲಕರಾದ ಶ್ರೀಧರ ಹೊಳ್ಳ ಅಭಿಪ್ರಾಯಪಟ್ಟರು.

# ನಮಗೆ ಸರಿ ಅನಿಸಿದ ಮಾರ್ಗದಲ್ಲಿ ಮುನ್ನಡೆಯೋಣ

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅಭಿಮತ





ಭಗವದ್ಗೀತೆಯಲ್ಲಿ, ಉಪನಿಷತ್ತಿನಲ್ಲಿ ಉಲ್ಲೇಖಿಸಿದಂತೆ ನಾವು ಯಾವುದು ಸರಿಯಾದ ಮಾರ್ಗ ಅನ್ನಿಸುತ್ತದೆಯೋ ಅದನ್ನು ಅನುಸರಿಸಬೇಕಿಲು. ಬೇರೆಯ ಮಾರ್ಗವನ್ನು ಟೀಕಿಸುವುದು ಸರಿಯಲ್ಲ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಪ್ರತಿಪಾದಿಸಿದರು.

ಬೆಳಗಾವಿ ಜಿಲ್ಲಾ ಬ್ರಾಹ್ಮಣ ಸಮಾಜ ಟ್ರಸ್ಟ್ ಆಯೋಜನೆ ಮಾಡಿದ ಸಭೆಯಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ನಮ್ಮ ಆಚಾರ್ಯತ್ರಯರು ಬೇರೆ ಬೇರೆ ಸಿದ್ಧಂತಗಳನ್ನು ಮಂಡಿಸಿದರು. ಮೊದಲನೆಯದಾಗಿ ಸನಾತನ ಧರ್ಮ ಇವತ್ತು ಉಳಿಯಬೇಕಾದರೆ ಶಂಕರಾಚಾರ್ಯರೇ ಮುಖ್ಯ ಕಾರಣ. ಆದಾದ ನಂತರ ಬಂದಂತಹ ಆಚರ್ಯರು ಸ್ವಲ್ಪ ವಿಭಿನ್ನವಾಗಿ ಕೆಲವು ಭಾಷ್ಯಗಳನ್ನು ಬರೆದರು. ಹೀಗಾಗಿ, ಈ ವ್ಯತ್ಯಾಸ ಇವತ್ತಿನ ಬ್ರಾಹ್ಮಣರ ಸಾಮಾನ್ಯ ಜೀವನಕ್ಕೆ ಎಷ್ಟರಮಟ್ಟಿಗೆ ಪ್ರಸ್ತುತ ಎನ್ನುವುದು ನಮಗೂ ಪ್ರಶ್ನೆಯೇ ಆಗಿದೆ. ಯಾವುದೇ ಧರ್ಮ ಮಾರ್ಗ ಇರಬಹುದು. ಮುಕ್ತಿ ಯಾವುದು ಸರಿ ಅನ್ನಿಸುತ್ತದೆಯೋ ಅದನ್ನು ಅನುಸರಿಸಿ ಶ್ರೇಯಸ್ಸನ್ನು ಪಡೆದುಕೊಳ್ಳಬೇಕು ಎಂದು ಅಶೋಕ ಹಾರನಹಳ್ಳಿಯವರು ಹೇಳಿದರು.

**ಧರ್ಮ ನಮ್ಮ ಜೀವನದ ಅವಿಭಾಜ್ಯ ಅಂಗ**

ನಮ್ಮ ಸಮಾಜದಲ್ಲಿಯೂ ಪ್ರತಿಭಾವಂತರಿದ್ದಾರೆ, ಸಮರ್ಥರಿದ್ದಾರೆ. ನಾನು ಹೇಳುವುದಿಷ್ಟೇ, ಇಲ್ಲಿಯವರೆಗೆ ನಾವು ಎಲ್ಲರಿಗೂ ಸಹಾಯ ಮಾಡುತ್ತಾ ಬಂದಿದ್ದೇವೆ. ಆದರೆ, ನಮ್ಮ ಸಮಾಜದಲ್ಲಿ ಯಾರು ತೊಂದರೆಯಲ್ಲಿದ್ದಾರೋ ಅಂಥವರಿಗೆ ರಕ್ಷಣೆ ಕೊಡುವವರು ಯಾರು ನಮ್ಮ ಸಮಾಜದ ಜನರು ಹತಾಶೆಗೊಮದಿದಾರೆ. ಏನು ಮಾಡುವುದೋ ಗೊತ್ತಿಲ್ಲ ಆರೋಗ್ಯ, ಶಿಕ್ಷಣ ಸೇರಿದಂತೆ ಹಲವಾರು ಸಮಸ್ಯೆಗಳನ್ನು ನಮ್ಮ ಸಮಾಜದವರು ಎದುರಿಸುತ್ತಿದ್ದಾರೆ. ಹೀಗಾಗಿ, ಟ್ರಸ್ಟ್ ಮಾಡಿಕೊಂಡಿದ್ದು ಸಂತಸದ ಸಂಗತಿ.

ಇನ್ನು ಕೈಗಾರಿಕೋದ್ಯಮಿಗಳನ್ನು ಸೇರಿಸಿಕೊಂಡು ಸಂಘಟನೆ ಮಾಡಬೇಕೆಂಬ ಆಲೋಚನೆ ಇದೆ. ಕೇವಲ ಸಂಸ್ಥೆ ಸ್ಥಾಪಿಸುವುದು ಸಮಾರಂಭ ಮಾಡುವುದು, ಶಲು ಹೊದಿಸುವುದರಿಂದ ಏನೂ ಆಗುವುದಿಲ್ಲ. ಆದರೆ, ನೀವು ಯಾವಾಗ ಜನೋಪಯೋಗಿಯಾಗಿ ಕೆಲಸವನ್ನು ಮಾಡುತ್ತೀರೋ, ಜನ ತಾವಾಗಿಯೇ ಬರುತ್ತಾರೆ. ಜನತೆಗೆ ಪರಿಣಾಮಕಾರಿಯಾಗಿ ಜನಪರವಾದ ಕೆಲಸಗಳನ್ನು ತಲುಪಿಸುವುದಕ್ಕಾಗಿ ಬಹಳಷ್ಟು ಅವಕಾಶಗಳಿವೆ. ಧರ್ಮ ನಮ್ಮ ಜೀವನದ ಅವಿಭಾಜ್ಯ ಅಂಗ. ಸಮಗ್ರವಾಗಿ ಬ್ರಾಹ್ಮಣರು ಎನ್ನುವಂತಹ ಆಲೋಚನೆ ಮಾಡುವ ಕಾಲ ಬಂದಿದೆ ಎಂದು ಅಶೋಕ ಹಾರನಹಳ್ಳಿಯವರು ಹೇಳಿದರು.

ಸಭೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸಂಘಟನಾ ಕಾರ್ಯದರ್ಶಿ ಶ್ರೀ ಕಾರ್ತೀಕ್ ಎಸ್. ಬಾಪಟ್ ಮಾತನಾಡಿದರು. ಟ್ರಸ್ಟ್ ಪರವಾಗಿ ಅಶೋಕ ಹಾನಹಳ್ಳಿ ಮತ್ತು ಬಾಪಟ್‌ರವರನ್ನು ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಬ್ರಾಹ್ಮಣ ಸಮಾಜದ ಬೇರೆ ಬೇರೆ ಸಂಘಟನೆಗಳವರು ಅಶೋಕ ಹಾರನಹಳ್ಳಿ ಅವರನ್ನು ಸನ್ಮಾನಿಸಿದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಅವರನ್ನು ಶಾಸಕ ಅಭಯ ಪಾಟೀಲ ಶಾಲು ಹೊದಿಸಿ ಸನ್ಮಾನಿಸಿದರು. ಹಾರನಹಳ್ಳಿ ಅವರು ಹಿಂದವಾಡಿಯ ಗುರದೇವ ರಾನಡೆ ಮಂದಿರಕ್ಕೂ ಭೇಟಿ ನೀಡಿದರು. ಅಲ್ಲಿನ ಗ್ರಂಥಾಲಯ ಮತ್ತು ರಾನಡೆ ಅವರು ನಡೆದುಬಂದ ದಾರಿಯ ಬಗ್ಗೆ ಎಸಿಪಿಆರ್ ಕಾರ್ಯದರ್ಶಿಯೂ ಆಗಿರುವ ನ್ಯಾಯವಾದಿ ಎಂ.ಜಿ. ಜಿರಲಿ ಅವರೊಂದಿಗೆ ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ಎಸಿಪಿಆರ್ ವತಿಯಿಂದ ಹಾರನಹಳ್ಳಿಯವರನ್ನು ಸನ್ಮಾನಿಸಲಾಯಿತು.

# ಮುಧೋಳ ತಾಲ್ಲೂಕು ಬ್ರಾಹ್ಮಣ ಸಂಘದ 30ನೇ ವಾರ್ಷಿಕೋತ್ಸವ,

## ಒಳಪಂಗಡ ಮರೆತು ಬ್ರಾಹ್ಮಣರು ಒಂದಾಗಬೇಕು – ಅಶೋಕ ಹಾರನಹಳ್ಳಿ





'ಒಳಪಂಗಡಗಳನ್ನು ಮರೆತು ಹೊರಜಗತ್ತಿನ ಮುಂದೆ ನಾವೆಲ್ಲ ಬ್ರಾಹ್ಮಣರು ಎಂದು ಗುರುತಿಸಿಕೊಳ್ಳದಿದ್ದರೆ ಭವಿಷ್ಯದಲ್ಲಿ ಅಪಾಯ ಎದುರಿಸಬೇಕಾಗುತ್ತದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಹೇಳಿದರು.

ನಗರದ ಶ್ರೀ ರಾಘವೇಂದ್ರಸ್ವಾಮಿ ಕಲ್ಯಾಣ ಮಂಟಪದಲ್ಲಿ ಶನಿವಾರ ನಡೆದ ಮುಧೋಲ ತಾಲ್ಲೂಕು ಬ್ರಾಹ್ಮಣ ಸಂಘದ 30ನೇ ವಾರ್ಷಿಕೋತ್ಸವ, ಸಂಗೀತ ಸಂಜೆ 'ಸಂಘಟನೆ ಪರ್ವ' ಸಮಾರಂಭದಲ್ಲಿ ಮಾತನಾಡಿದರು.

ಜಾತಿ ಗಣತಿ ಸಂದರ್ಭದಲ್ಲಿ ನಾವು ಮಧ್ವರು, ಸ್ಮಾರ್ತರು, ಅಯ್ಯಾಂಗಾರ್‌ರು ಎಂದು ನಮೂದಿಸಿದರೆ ಅದರಿಂದ ಸಮಾಜಕ್ಕೆ ನಷ್ಟ ಉಂಟಾಗುತ್ತದೆ. ಮುಂಬರುವ ವರ್ಷಗಳಲ್ಲಿ ಸಮಾಜದ ಸಂಘಟನೆ ಅವಶ್ಯಕವಾಗುತ್ತದೆ. ಈ ನಿಟ್ಟಿನಲ್ಲಿ ಒಗ್ಗೂಡಬೇಕು ಎಂದು ಕರೆ ನೀಡಿದರು.

'ಕುಟುಂಬ ಕಲಹಗಳು ಕಡಿಮೆ ಆಗಲು ಮಹಾಸಭೆ ಮೂಲಕವೇ ಆಪ್ತ ಸಮಾಲೋಚನೆ ಕೇಂದ್ರ ತೆರೆಯಲು ನಿರ್ಧರಿಸಿದ್ದೇವೆ' ಎಂದರು.

'ಬ್ರಾಹ್ಮಣರು ರಾಜಕೀಯದಲ್ಲಿ ಬೆಳೆಯೋದು ಕಷ್ಟ. ಬೆಳೆದವರನ್ನು ಬೆಂಬಲಿಸದಿದ್ದರೆ ಮುಂದೆ ಆ ಕ್ಷೇತ್ರದಲ್ಲಿ ಮತ್ತೆ ಸಮಾಜಕ್ಕೆ ಅವಕಾಶ ಸಿಗೋದಿಲ್ಲ. ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್‌ನಿಂದ ಒಬ್ಬರು ಮಾತ್ರವೇ ಎಂಎಲ್‌ಸಿ ಇದ್ದು, ಬಿಜೆಪಿ, ಜೆಡಿಎಸ್‌ನಿಂದ ಒಬ್ಬರಿಗೂ ಅವಕಾಶವಿಲ್ಲ. ಆದರೆ ಸಮಾಜಕ್ಕೆ ಪ್ರಾಧಿನಿಧ್ಯ ನೀಡುವಂತೆ ಒತ್ತಡ ಹಾಕುವ ಕೆಲಸ ಆಗಬೇಕು' ಎಂದು ಹೇಳಿದರು.

ರಾಜ್ಯ ಉಪಾಧ್ಯಕ್ಷ ಡಾ. ಗಿರೀಶ ಮಸೂರಕರ ಮಾತನಾಡಿ, 'ಬ್ರಾಹ್ಮಣರಲ್ಲಿ ಒಗ್ಗಟ್ಟು ಕಡಿಮೆ ಎಂದ ಮಾತು ದೂರಗಗೊಳಿಸಿ ಒಗ್ಗೂಡಿಸುವ ಕೆಲಸ ಮಾಡಬೇಕು. ಸಮಾಜದಲ್ಲಿ ಒಳಪಂಗಡಗಳನ್ನು ಮರೆತು ವಿಪ್ರರೆಲ್ಲರೂ ಒಂದಾಗಬೇಕು' ಎಂದರು.

ಮಹಾಸಭಾ ರಾಜ್ಯ ಸಂಘಟನಾ ಕಾರ್ಯದರ್ಶಿ ಕಾರ್ತೀಕ್ ಎಸ್. ಬಾಪಟ್ ಹಾಗೂ ಸುಬ್ಬಣ್ಣಾಚಾರ್ಯ ಮನಗೋಳಿ ಮಾತನಾಡಿದರು.

ತಾಲ್ಲೂಕು ಘಟಕದ ಮಾಜಿ ಅಧ್ಯಕ್ಷ ಜಿ.ಆರ್. ಜೋಶಿ, ಪಿ.ಎನ್. ಮೊಕಾಶಿ, ಕಿಶೋರ ಮಸೂರಕರ, ಸತೀಶ ಸೋನಾಇ ಕುಲಕರ್ಣಿ, ಅಶೋಕ ಕುಲಕರ್ಣಿ ಅವರನ್ನು ಸನ್ಮಾನಿಸಲಾಯಿತು.

ತಾಲ್ಲೂಕು ಘಟಕದ ಅಧ್ಯಕ್ಷ ರಾಘವೇಂದ್ರ ಕುಲಕರ್ಣಿ, ಗಾಯಕ ಅನಂತರಾಜ ಮಿಸ್ತ್ರ ಇದ್ದರು.



## ಇಕ್ಕೇರಿ ರಾಮಭಟ್ಟರ ನೆನಪಿನ ಗ್ರಂಥ ಲೋಕಾರ್ಪಣೆ

# ಹಿಂದೂ ಸನಾತನ ಧರ್ಮ ಶಾಶ್ವತ – ಅಶೋಕ ಹಾರನಹಳ್ಳಿ




ತತ್ನ ಪೂರ್ವಜರಿಗೆ ನೀಡುವ ಗೌರವ ಹಾಗೂ ಶ್ರದ್ಧಾಭಕ್ತಿ ಈ ಸಂಸ್ಕಾರವು ಸನಾತನ ಹಿಂದೂ ಧರ್ಮದಲ್ಲಿ ಮಾತ್ರ ಇದೆ. ಉಳಿದಂತೆ ಇನ್ನಾವ ಧರ್ಮದಲ್ಲಿಯೂ ಇದನ್ನು ನೋಡಲು ಸಾಧ್ಯವಿಲ್ಲ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರೂ ಹಾಗೂ ಲೋಕ ಶಿಕ್ಷಣ ಟ್ರಸ್ಟ್‌ನ ಧರ್ಮದರ್ಶಿ ಅಶೋಕ ಹಾರನಹಳ್ಳಿಯವರು ಹೇಳಿದರು.

ಸಾಗರದ ಇಕ್ಕೇರಿ ರಾಮಭಟ್ಟರ ಸ್ವಗೃಹದಲ್ಲಿ ಶನಿವಾರ ರಾಮಭಟ್ಟರ ನೆನಪಿನ ಗ್ರಂಥವನ್ನು ಲೋಕಾರ್ಪಣೆ ಮಾಡಿದ ಅವರು ಮಾತನಾಡಿ, ಅಘೋರೇಶ್ವರ ಸನ್ನಿಧಿಯಲ್ಲಿ ಪೂಜೆಯನ್ನು ಮಾಡಿ ತಮ್ಮ ವೃತ್ತಿಯ ಜೊತೆಗೆ ಕೃಷಿಯನ್ನು ಕಾಯಕ ಯೋಗಿಯಂತೆ ಶ್ರಮಪಟ್ಟು ಕೆಲಸ ಮಾಡಿ ಸಮಾಜದಲ್ಲಿ ಬದುಕುವ ಪಾಠವನ್ನು ಕಲಿಸಿಕೊಟ್ಟ ರಾಮಭಟ್ಟರ ನೆನಪಿನ ಗ್ರಂಥ ಅವರ ಮಕ್ಕಳು ಹಾಗೂ ಕುಟುಂಬದವರು ಲೋಕಕ್ಕೆ ಪರಿಚಯಿಸುತ್ತಿರುವ ಅತ್ಯಂತ ಶ್ರೇಷ್ಠವಾದ ಕೆಲಸ ಎಂದರು.

**ಹೆಣ್ಣು ಸಿಗುತ್ತಿಲ್ಲ**

ಬ್ರಾಹ್ಮಣಸಮುದಾಯದ ಕೃಷಿಕರು ಸೇರಿ ಇತರೆ ಕಾಯಕಗಳಲ್ಲಿ ತೊಡಗಿಸಿಕೊಂಡವರ ಗಂಡು ಮಕ್ಕಳಿಗೆ ಹೆಣ್ಣು ಸಿಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಉತ್ತರ ಕನ್ನಡ ಜಿಲ್ಲೆ ಸೇರಿ ಇತರೆ ಭಾಗಗಳಲ್ಲೂ ಗಮನಿಸಬಹುದಾಗಿದೆ.

ಇತ್ತೀಚಿಗೆ ನಗರ ಪ್ರದೇಶಕ್ಕೆ ವಲಸೆ ಹೋಗುವ ಯುವಜನತೆ ಗ್ರಾಮಾಂತರ ಪ್ರದೇಶದಲ್ಲಿ ವಾಸ ಮಾಡುತ್ತಿರುವ ನಮ್ಮ ಹೆತ್ತವರನ್ನೇ ಮರೆಯುತ್ತಿದ್ದೇವೆ. ಅವರ ವೃದ್ಧಾಪ್ಯ ಸಮಯದಲ್ಲಿ ಹೊರದೇಶದಲ್ಲಿರುವ ಮಕ್ಕಳೇ ಹೆಚ್ಚಾಗುತ್ತಿದ್ದಾರೆ. ಇಂತಹ ಕಾಲಘಟ್ಟದಲ್ಲಿರುವಾಗ ಸಂಸ್ಕಾರಯುತ ಜೀವನ ಹಾಗೂ ನಮ್ಮ ಧರ್ಮದ ಸಂದೇಶವನ್ನು ಪಾಲನೆ ಮಾಡುವುದು ಕರ್ತವ್ಯವಾಗಿದೆ. ಇಂದು ಕಾವಿಯನ್ನು ಉಟ್ಟ ಕೆಲವರು ಧರ್ಮದ ಬಗ್ಗೆ ಅಪಪ್ರಚಾರ ಮಾಡುತ್ತಾರೆ. ತಾವು ಉಟ್ಟಿರುವ ಕಾವಿಯೇ ಧರ್ಮದ ಸಂಕೇತ ಎನ್ನುವುದನ್ನೇ ಮರೆತಿದ್ದಾರೆ. ಆದರೆ ನಮ್ಮ ಹಿಂದೂ ಸನಾತನ ಧರ್ಮ ಶಾಶ್ವತವಾಗಿರುವಂತಹದು ಎಂದರು.

ಇದೇ ಸಂದರ್ಭದಲ್ಲಿ ಗ್ರಂಥದ ಕುರಿತು ವಿದ್ವಾನ್ ಗಜಾನನ ಭಟ್ ರೇವಣಕಟ್ಟೆ ಅವರು ಮಾತನಾಡಿದರು. ಡಾ. ಗಜಾನನ ಶರ್ಮಾ ಹಾಗೂ ಗ್ರಂಥದ ಸಂಪಾದಕರು ತಿರುಮಲ ಮಾವಿನಕುಳಿ ಮಾತನಾಡಿದರು. ಡಾ. ಎಂ.ಆರ್. ಹೆಗಡೆ, ಹೈಕೋರ್ಟ್, ನ್ಯಾಯವಾದಿ ಆರ್. ಗೋಪಾಲ ಭಟ್ ವೇ. ನಾಗೇಂದ್ರ ಭಟ್ಟರು ಉಪಸ್ಥಿತರಿದ್ದರು. ಮಾಜಿ ಶಾಸಕ ಹರತಾಳು ಹಾಲಪ್ಪ, ಮತ್ತಿಕೊಪ್ಪ ಹರನಾಥರಾವ್, ಶಿವಮೊಗ್ಗದ ಹಿರಿಯ ನ್ಯಾಯವಾದಿ ಶ್ರೀಪಾದ ಬಿ.ಆರ್. ಜಯಂತ್ ಇನ್ನಿತರರಿದ್ದರು.


## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

# ಅನಕೆರೆ ಪಟ್ಟಾಭಿರಾಮ ಸೇವಾ ಸಮಿತಿ – ಚನ್ನರಾಯಪಟ್ಟಣ

## ಮಕ್ಕಳನ್ನು ಭಾವನಾ ಜೀವಿಗಳನ್ನಾಗಿಸಿ – ಪ್ರೊ. ಓ.ಎನ್. ಪ್ರಭಾಕರ್ ಸಲಹೆ



ಮಕ್ಕಳನ್ನು ಭಾವನಾ ಹಾಗೂ ಆಧ್ಯಾತ್ಮಿಕ ಜೀವಿಗಳನ್ನಾಗಿಸಿ ರೂಪಿಸುವ ಹೊಣೆಗಾರಿಕೆ ನಮ್ಮೆಲ್ಲರದ್ದಾಗಿದೆ ಎಂದು ಉನ್ನತ ಶಿಕ್ಷಣ ಇಲಾಖೆಯ ವಿಶ್ರಾಂತ ಪ್ರೊ.ಟಿ.ಎನ್. ಪ್ರಭಾಕರ್ ತಿಳಿಸಿದರು.

ಚನ್ನರಾಯಪಟ್ಟಣ ತಾಲ್ಲೂಕು ಆನೆಕೆರೆ ಗ್ರಾಮದ ಶ್ರೀ ಚನ್ನಕೇಶವಸ್ವಾಮಿ ದೇವಾಲಯದ ಆವರಣದಲ್ಲಿ ಪಟ್ಟಾಭಿರಾಮ ಸೇವಾ ಸಮಿತಿ ಬ್ರಾಹ್ಮಣ ಸಂಘ ಹಾಗೂ ಬೆಂಗಳೂರಿನ ಆನೆಕರೆ ವಿಪ್ರ ಬಳಗದ ವತಿಯಿಂದ ಆಯೋಜಿಸಿದ್ದ ಧಾರ್ಮಿಕ ಸಮಾರಂಭದಲ್ಲಿ ಅವರು ಮಾತನಾಡಿದರು.

"ನಮ್ಮ ಮನೆಗಳಲ್ಲಿ ನಾವು ನಾವಾಗಿರಬೇಕು. ಧನಾತ್ಮಕ ಚಿಂತನೆಗಳು ನಮ್ಮದಾಗಿರಬೇಕು. ಒಳಿತು ಕೆಡುಕುಗಳ ವಿವೇಚನೆ ನಮ್ಮೆಲ್ಲರಿಗೂ ಇರಬೇಕು. ಮತ್ತೊಬ್ಬರ ಒಳ್ಳೆಯ ಮಾತುಗಳು ನಮ್ಮ ಜೀವನಕ್ಕೆ ದಾರಿಯಾಗಬೇಕು. ಆ ಮೂಲಕ ನಮ್ಮ ವ್ಯಕ್ತಿತ್ವ ವಿಕಾಸ ಮಾಡಿಕೊಳ್ಳಬೇಕು ಎಂದರು.

"ಮಕ್ಕಳನ್ನು ಭಾವನಾಜೀವಿ, ಆಧ್ಯಾತ್ಮಿಕ ಜೀವಿಗಳನ್ನಾಗಿ ರೂಪಿಸುವ ಮೂಲಕ ಅವರನ್ನು ಪರಿಪೂರ್ಣ ಮಾನವರನ್ನಾಗಿ ಮಾಡಬೇಕು. ವೇದಗಳಿಗಿಂತ ಶ್ರೇಷ್ಠವಾದ ಶಾಸ್ತ್ರಗಳಿಲ್ಲವೆಂಬ ಸತ್ಯದ ಅರಿವು ನಮಗಿರಬೇಕು. ತಮ್ಮ ಗ್ರಾಮದ ಬಗ್ಗೆ ಹೆಮ್ಮೆಯಿರಬೇಕು" ಎಂದೂ ಹೇಳಿದರು. ಬ್ರಾಹ್ಮಣ ಸಂಘದ ಹಿರಿಯರಾದ ಮಹದೇವಶಾಸ್ತ್ರಿ, ಕಲಾವಿದ ಸಿ.ರಾಜ್ ಉಪಸ್ಥಿತರಿದ್ದರು.

**ವೈದಿಕ ರತ್ನ ಪ್ರಶಸ್ತಿ :** ಹಾಸನದ ವೇ.ಬ್ರ.ಶ್ರೀ. ಎಚ್.ಸಿ. ಕೇಶವಪ್ರಸಾದ್ ಅವರಿಗೆ ಕೀರ್ತಿಶೇಷ ಎ.ಎಸ್. ನಂಜುಂಡಭಟ್ಟರ ಸ್ಮರಣಾರ್ಥ ಅವರ ಕುಟುಂಬದ ವತಿಯಿಂದ ವೈದಿಕರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಹಿರಿಯ ದಂಪತಿಗಳಾದ ಪದ್ಮ ಮತ್ತು ಎ.ಎನ್. ಶ್ರೀನಿವಾಸ್ ಹಾಗೂ ಎ.ಆರ್. ಛಾಯಾಲಕ್ಷ್ಮಿ ಮತ್ತು ಎನ್.ಕೆ. ನಾಗೇಶ್‌ಭಟ್ ಅವರನ್ನು ಸನ್ಮಾನಿಸಲಾಯಿತು. ಕಳೆದ ಸಾಲಿನಲ್ಲಿ ನಾನಾ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಿದ ಶ್ರೀಕಾಂತ್ ಕೆ.ವಿ., ಶ್ರೀಪ್ರದ, ಬಿ.ಕೆ. ನರಸಿಂಹ, ಎಂ.ಜಿ. ಸ್ಫೂರ್ತಿ ಮತ್ತು ಎ.ಕೆ. ಶ್ರೇಯಸ್ ಶರ್ಮ ಅವರನ್ನು ಅಭಿನಂದಿಸಲಾಯಿತು.

**ಬಹುಮಾನ ವಿತರಣೆ :** ವಿವಿಧ ಆಟೋಟಗಳಲ್ಲಿ ವಿಜೇತರಾದ ಸಂಹಿತ, ಪ್ರವರ್ಧನ್, ಅಮೇಯ, ಸಮೀಕ್ಷಾ, ಅಮೃತ, ಶ್ರೇಯಾ, ಎಂ.ಎಸ್.ಸಾರಿಕಾ, ಎಚ್.ಆರ್. ವಿಜಯಲಕ್ಷ್ಮಿ, ಎಚ್.ಕೆ. ಸ್ವರ್ಣಲತಾ, ಡಿ.ಎಸ್. ಸ್ವರ್ಣ, ವಾಣಿ, ನಿಮಿಷಾಂಬ ಅವರಿಗೆ ಬಹುಮಾನಗಳನ್ನು ವಿತರಿಸಲಾಯಿತು.

**ಕಲಾವಿದ ಸಿ.ರಾಜ್‌ಗೆ ಸನ್ಮಾನ :** ಚನ್ನರಾಯಪಟ್ಟಣದ ಕಲಾವಿದ ಮೈಕ್ ಸಿ.ರಾಜ್ ಎಂದೇ ಹೆಸರಾಗಿರುವ ಪ್ರಸಾದಕ ಸಿ.ರಾಜ್ ಅವರನ್ನು ವೇದಿಕೆಯಲ್ಲಿ ಸನ್ಮಾನಿಸಲಾಯಿತು. ಕಳೆದ 50 ವರ್ಷಗಳ ನೆನಪುಗಳನ್ನು ಸಮಾರಂಭದ ಅಧ್ಯಕ್ಷರಾಗಿದ್ದ ಮಹದೇವಶಾಸ್ತ್ರಿಗಳು ಮೆಲುಕು ಹಾಕುವ ಮೂಲಕ ಸಮಾರಂಭಕ್ಕೆ ಭಾವನಾತ್ಮಕ ಸ್ಪರ್ಶ ನೀಡಿದರು. ಸಾಮರಸ್ಯದ ಸನ್ನಿವೇಶಕ್ಕೆ ಸಮಾರಂಭ ಕೊಂಡಿಯಾಯಿತು.


**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**

**ವಧು–ವರ ಮಾಹಿತಿ ಕೇಂದ್ರ, ಬೆಂಗಳೂರು**

**ಸ್ಥಳ : ಗಾಯತ್ರಿ ಭವನ**

**ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಬನಶಂಕರಿ 2ನೆ ಹಂತ, ಬೆಂಗಳೂರು–70.**

**ದೂರವಾಣಿ : 080–26770066/26771695**

**ಸಮಯ : ಸಂಜೆ 5.00 ರಿಂದ 7.00 ರವರೆಗೆ**

**ಮಂಗಳವಾರ ಮತ್ತು ಶನಿವಾರ**

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು : ಶ್ರೀಮತಿ ಜಯಲತಾ ಸತ್ಯನಾರಾಯಣ್**

**ಮೊ. : 9916325902**

**ಸದಸ್ಯರು**

**ಶ್ರೀಮತಿ ನಳಿನಿ ನಟರಾಜ್, ಮೊ. : 9481788495**

**ಶ್ರೀಮತಿ ಗಾಯತ್ರಿ ರಾವ್, ಮೊ>9980481245**

# ದಾವಣಗೆರೆಯಲ್ಲಿ ವಿಪ್ರ ವಟು ಶಿಕ್ಷಣ ಶಿಬಿರ






ಬ್ರಾಹ್ಮಣ ಸಮಾಜ ಸೇವಾ ಸಂಘದ ಎಪ್ರ ವಟು ಶಿಕ್ಷಣ ಸಮಿತಿ, ದಾವಣಗೆರೆ ಇವರ ಆಶ್ರಯದಲ್ಲಿ ದಿನಾಂಕ : 10–05–2024 ರಿಂದ 19–05–2024 ರವರೆಗೆ ದಾವಣಗೆರೆಯ ಪಿ.ಜೆ.ಬಡಾವಣೆಯ ಬ್ರಾಹ್ಮಣ ವಿದ್ಯಾರ್ಥಿ ನಿಲಯದಲ್ಲಿ ಹತ್ತು ದಿನಗಳ ಕಾಲ ವಟುಗಳಿಗೆ ವೇದ, ಪುರುಷಸೂಕ್ತ, ವಿಷ್ಣುಸಹಸ್ರನಾಮ, ಭಗವದ್ಗೀತೆ, ಶಾಂತಿಮಂತ್ರಗಳು ಹಾಗೂ ಸಂಧ್ಯಾವಂದನೆ ಕ್ರಮವನ್ನು ಅಭ್ಯಾಸ ಮಾಡಿಸಲಾಯಿತು. ಈ ಶಿಬಿರವು ವೇ.ಬ್ರ.ಶ್ರೀ ಶಂಕರನಾರಾಯಣ ಶಾಸ್ತ್ರಿಗಳ ನೇತೃತ್ವದಲ್ಲಿ. ನಡೆಯಿತು. ಶಿಬಿರಾರ್ಥಿಗಳು ದಾವಣಗೆರೆ, ಮುರುಡೇಶ್ವರ, ತುಮಕೂರು, ಬೇಲೂರು, ಶಿವಮೊಗ್ಗ ಮೊದಲಾದ ಕಡೆಯಿಂದ ಆಗಮಿಸಿ ಅತ್ಯಂತ ಉತ್ಸಾಹದಿಂದ ಭಾಗವಹಿಸಿದ್ದರು. ಕೊನೆಯದಿನ ಸಮಾರೋಪ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಅಧ್ಯಕ್ಷತೆಯನ್ನು ಡಾ॥ ಎಂ.ಸಿ. ಶಶಿಕಾಂತ್ ವಹಿಸಿ ವಿದ್ಯಾರ್ಥಿಗಳು ಸಂಧ್ಯಾವಂದನೆಯನ್ನು ಬಿಡದೆ ಮಾಡಲು ತಿಳಿಸಿದರು. ಶಾಲಾ ಪಾಠಗಳಷ್ಟೇ ಅಲ್ಲದೆ ಆಧ್ಯಾತ್ಮಿಕ ವಿದ್ಯೆಯೂ ಮುಖ್ಯ. ಸಂಸ್ಕಾರವಂತ ಮಕ್ಕಳೇ ಮುಂದೆ ಸತ್ಪ್ರಜೆಗಳಾಗುವವರು ಎಂದು ತಿಳಿಸಿದರು. ಆಚಾರ್ಯತ್ರಯರ ಅಥವಾ ಯಾವುದೇ ಗುರುಗಳ ನಿಂದನೆ ಮಾಡಬಾರದು. ಎಲ್ಲಾ ಗುರುಗಳನ್ನೂ ಗೌರವದಿಂದ ಕಾಣಬೇಕು. ಒಗ್ಗಟ್ಟು ಬಹಳ ಮುಖ್ಯ ಎಂದು ತಿಳಿಸಿದರು. ಪ್ರತೀ ಬುಧವಾರ ಮತ್ತು ಗುರುವಾರ ಬ್ರಾಹ್ಮಣ ಸಮಾಜದಿಂದ ನಡೆಸುವ ವೇದಪಾಠಕ್ಕೆ 10 ವರ್ಷದಿಂದ 75 ವರ್ಷವರ್ಷದವರೆಗಿನ : ಶಿಕ್ಷಾರ್ಥಿಗಳು ಬರುತ್ತಿದ್ದಾರೆ. ವಯಸ್ಸಾಯಿತು ಎಂದು ಯೋಚಿಸದೆ ಬನ್ನಿ. ಕಲಿಕೆಗೆ ವಯೋಮಿತಿ ಇಲ್ಲ ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವೇ.ಬ್ರ.ಶ್ರೀ ಶಂಕರನಾರಾಯಣ ಶಾಸ್ತ್ರಿಗಳು ಮಾತನಾಡುತ್ತಾ, ಯಾವದೇ ಸಂದರ್ಭದಲ್ಲಿ ವೇದಪಾಠ ಹೇಳಿಕೊಡಲು ನಾನು ಸಿದ್ಧನಿದ್ದೇನೆ. ನಮ್ಮ ಮನೆಯ ಬಾಗಿಲು ತೆರೆದಿರುತ್ತದೆ ಎಂದು ನುಡಿದರು. ಈ ವರ್ಷ ಕಲಿತ ವಿದ್ಯೆ ಅಭ್ಯಾಸ ಮಾಡಿಕಂಡು ಬನ್ನಿ ಮುಂದಿನ ವರುಷ ಇನ್ನೂ ಹೆಚ್ಚಿನ ಪಾಠ ಹೇಳಿಕೊಡುತ್ತೇವೆ ಎಂದು ಹುರಿದುಂಬಿಸಿದರು. ಅಗ್ನಿಕಾರ್ಯ ಶ್ರದ್ಧಯಿಂದ ಮಾಡುವ ಮಕ್ಕಳು ಮೇಧಾವಿಗಳಾಗುವರು. ನಿಮ್ಮ ಮಕ್ಕಳಿಗೆ ಅಗ್ನಿಕಾರ್ಯ ಮಾಡುವುದನ್ನು ಕಲಿಸಲು ನಾನು ಸಿದ್ಧ. ನಮ್ಮ ಮನೆಯಲ್ಲಿ ಮಾಡಿಸುವೆ. ನೀವು ಯಾವಾಗ ಬೇಕಾದರೂ ಬಂದು ಕಲಿತುಕೊಳ್ಳಿ. ನಿಮ್ಮ ಮನೆಗಳಲ್ಲಿ ಮಕ್ಕಳಿಂದ ಮಾಡಿಸಿ ನಂತರ ನಿಮ್ಮ ಮಕ್ಕಳಲ್ಲಾಗುವ ಬದಲಾವಣೆ ನೋಡಿ ಎಂದು ಪೋಷಕರನ್ನು ಪ್ರೇರೇಪಿಸಿದರು.

ನಗರದ ಖ್ಯಾತ ವೈದ್ಯರಾದ ಡಾ॥ ಎಸ್.ಆರ್. ಹೆಗಡೆಯವರು ಮಾತನಾಡಿ ಯೋಗ, ಸಂಧ್ಯಾವಂದನೆ. ಪ್ರಾಣಾಯಾಮ ಆರೋಗ್ಯಕರ ಜೀವನದ ಗುಟ್ಟು ಎಂದು ತಿಳಿಸಿ, ಶಿಬಿರದ ಮಹತ್ವಗಳನ್ನು ತಿಳಿಸಿದರು. ವಿಪ್ರವಟು ಶಿಕ್ಷಣ ಸಮಿತಿಯ ಅಧ್ಯಕ್ಷರಾದ ಶ್ರೀ ವಿನಾಯಕ ಡಿ. ಜೋಷಿಯವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಶಿಬಿರದಲ್ಲಿ ಕಲಿತ ವೇದ. ಶ್ಲೋಕಗಳನ್ನು ವಿದ್ಯಾರ್ಥಿಗಳು ಸಭೆಯಲ್ಲಿ ಪ್ರಸ್ತುತಪಡಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ವಿವಿಧ ಚಟುವಟಿಕೆಗಳಲ್ಲಿ ವಿಜೇತರಾದ ಶಿಬಿರಾರ್ಥಿಗಳಿಗೆ ಬಹುಮಾನ, ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಶಿಕ್ಷಕರು (ವೇ.ಬ್ರ.ಶ್ರೀ ಶಂಕರನಾರಾಯಣ ಶಾಸ್ತಿಗಳು, ಶ್ರೀ ಡಿ.ಕೆ. ಸತ್ಯನಾರಾಯಣ ಮೂರ್ತಿ. ಶ್ರೀ ವಿನಾಯಕ ಜೋಷಿ, ದತ್ತಾತ್ರೇಯ ನರಸಿ0ಹ ಜೋಷಿ, ಶ್ರೀಮತಿ ಡಾ॥ ರೂಪಾ ಶಶಿಕಾಂತ್, ಜೆ.ಎಂ. ಪುಟ್ಟಸ್ವಾಮಿ. ಶ್ರೀ ಸುಬ್ರಹಮಣ್ಯ ಶರ್ಮ, ಶ್ರೀಮತಿ ಸಾವಿತ್ರಿ ಭಾಸ್ಕರ್ ಭಟ್, ಶ್ರೀ ಟಿ.ಆರ್. ಹರೀಶ್, ಶ್ರೀ ಕೆ.ಎಸ್ ವೆಂಕಟೇಶ್, ಶ್ರೀ ಶ್ರೀಹರ್ಷ ಮತ್ತು ಶ್ರೀಕಾಂತ್ ಭಟ್) ಮತ್ತು ದಾನಿಗಳನ್ನು ಸನ್ಮಾನಿಸಲಾಯಿತು. ಸಭೆಯಲ್ಲಿ ಸ್ವಾಗತ ಶ್ರೀ ರಾಮಚಂದರಾವ್, ವಂದನಾರ್ಪಣೆಯನ್ನು ಶ್ರೀ ಡಿ.ಕೆ.ಎಸ್. ಮೂರ್ತಿಯವರು ಮಾಡಿದರು. ಶ್ರೀ ಗೋಪಾಲದಾಸ್ ನಿರೂಪಿಸಿದರು. ಡಾ॥ ಬಿ.ಟಿ. ಅಚ್ಯುತ, ಗಿರೀಶ್ ನಾಡಿಗ್, ಮೋರ್ತಿ ಆರ್ ಸುಬ್ರಹ್ಮಣ್ಯ. ಬಾಲಕೃಷ್ಣ ವೈದ್ಯ. ಸತ್ಯನಾರಾಯಣ ರಾವ್. ಮೋಹನ್ ದೀಕ್ಷಿತ್. ಭಾಸ್ಕರ್ ಭಟ್, ಆನಂದಮೂರ್ತಿ. ಗೋಪಾಲರಾವ್ ಮೊದಲಾದವರು ಭಾಗವಹಿಸಿದ್ದರು.

# ಮಹಾಸಭೆಯ ಕೇಂದ್ರ ನಿಧಿಗೆ ದೇಣಿಗೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಕೇಂದ್ರ ನಿಧಿಯ ಅಶಕ್ತ ಮಹಿಳೆಯರು, ವೃದ್ದರಿಗೆ ನೀಡುತ್ತಿರುವ ಮಾಸಾಶನ ನಿಧಿಗೆ ಬೆಂಗಳೂರಿನ ಪದ್ಮನಾಭನಗರದ ಡಾ॥ ರಮೇಶ್ ಮತ್ತು ಶ್ರೀಮತಿ ಸಿ.ಎ. ಶಾಂತಮ್ಮನವರು ರೂ.2,00,000=00 ಗಳ ದೇಣಿಗೆಯನ್ನು ನೀಡಿದ್ದಾರೆ. ಈ ಹಿಂದೆ ಡಿಸೆಂಬರ್ 2023ರಲ್ಲಿ ರೂ.1,00,000 ಗಳ ದೇಣಿಗೆಯನ್ನು ನೀಡಿದ್ದನ್ನು ಸ್ಮರಿಸುತ್ತೇವೆ. ದಾನಿಗಳಿಗೆ ಮಹಾಸಭೆಯ ಪರವಾಗಿ ಧನ್ಯವಾದಗಳು.

# ನಿವೃತ್ತ ನ್ಯಾಯಮೂರ್ತಿ ಶ್ರೀ ಎ.ಎಂ. ಚಂದ್ರಶೇಖರ್ ಮಹಿಳಾ ವಸತಿ ನಿಲಯಕ್ಕೆ ಭೇಟಿ







ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ನಡೆಸುತ್ತಿರುವ ವಿದ್ಯಾವಾಸಿನಿ ಮಹಿಳಾ ವಿದ್ಯಾರ್ಥಿ ನಿಲಯಕ್ಕೆ ಮೇ 18 ರಂದು ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ಎ.ವಿ ಚಂದ್ರಶೇಖರ್ ಮತ್ತು ಜೆ. ಫ್ರಾಗ್ ಕಂಪನಿಯ ಆರ್. ಎನ್. ಖ.ಯ ಮುಖ್ಯಸ್ಥರಾದ ಶ್ರೀ ಪ್ರಸನ್ನ ರಾಘವೇಂದ್ರ ಅವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ನ್ಯಾಯಮೂರ್ತಿಗಳಾದ ಶ್ರೀ ಎ.ವಿ ಚಂದ್ರಶೇಖರ್ ಅವರು ವಿದ್ಯಾರ್ಥಿನಿಲಯಕ್ಕೆ ನಾಲ್ಕು ವಾಟರ್ ಫಿಲ್ಟರ್‌ಗಳನ್ನು ಕೊಡುಗೆಯಾಗಿ ನೀಡಿದ್ದನ್ನು ಚಾಲನೆಗೊಳಿಸಿದರು ಮತ್ತು 10 ಲ್ಯಾಪ್ಟಾಪ್‌ಗಳನ್ನು ಬಡ ವಿದ್ಯಾರ್ಥಿಗಳಿಗೆ ನೀಡಿದರು. ಶ್ರೀ ಪ್ರಸನ್ನ ರಾಘವೇಂದ್ರ ಅವರು ವಿದ್ಯಾರ್ಥಿಗಳಿಗೆ ನಾಲ್ಕು ವಾಷಿಂಗ್ ಮಷೀನ್ ಅನ್ನು ನೀಡುವುದಾಗಿ ವಾಗ್ದಾನ ಮಾಡಿದರು. ಈ ಕಾರ್ಯಕ್ರಮದ ನೇತೃತ್ವವನ್ನು ವಸತಿ ನಿಲಯದ ಮುಖ್ಯಸ್ಥರು ಮತ್ತು ಇನ್ಫೋಸಿಸ್ ಕಂಪನಿಯ ನಿರ್ದೇಶಕರಾದ ಶ್ರೀ ಕೃಷ್ಣ ಸ್ವಾಮಿ ಅವರು ವಹಿಸಿದ್ದರು. ಸಪ್ತರ್ಷಿ ಫೌಂಡೇಷನ್ನಿನ ಖಜಾಂಚಿ ಟ್ರಸ್ಟಿಗಳಾದ ಶ್ರೀ ವೇಂಕಟೇಶ್ ಎಸ್. ನಾಯಕ್‌ರವರು ಉಪಸ್ಥಿತರಿದ್ದರು.

# ಕೂಟ ಮಹಾಜಗತ್ತು - ಐಸಿರಿ ಸಮ್ಮೇಳನ

## ಸ್ವಾವಲಂಬಿ ಬದುಕಿನತ್ತ ಇರಲಿ ಮಹಿಳೆಯರ ಚಿತ್ತ - ರೂಪಾಶಾಸ್ತ್ರಿ





ವಿಪ್ರ ಸಮುದಾಯದ ಮಹಿಳೆಯರು ಸ್ವಾವಲಂಬಿ ಬದುಕಿನತ್ತ ಚಿತ್ತ ಸಾಗಿಸಬೇಕು. ಆ ಮೂಲಕ ಮನೆಮನಗಳಲ್ಲಿ ಐಸಿರಿ ತುಂಬುವಂತಾಗಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷೆ ಶ್ರೀಮತಿ ರೂಪಾ ಶಾಸ್ತ್ರಿ ಹೇಳಿದರು.

ಸಾಲಿಗ್ರಾಮ ಶ್ರೀ ಗುರುನರಸಿಂಹ ದೇಗುಲದ ಬಯಲು ರಂಗಮಂದಿರದಲ್ಲಿ ಮಹಿಳಾ ವೇದಿಕೆ ಕೂಟ ಮಹಾಜಗತ್ತು ಕೇಂದ್ರ ಸಂಸ್ಥೆ ಮತ್ತು ಅಂಗಸಂಸ್ಥೆ ನೇತೃತ್ವದಲ್ಲಿ ಕೂಟ ಮಹಾಜಗತ್ತು ಕೇಂದ್ರ ಮತ್ತು ಅಂಗಸಂಸ್ಥೆ ಸಹಯೋಗದೊಂದಿಗೆ ಐಸಿರಿ ಮಹಿಳಾ ಸಮ್ಮೇಳನ 2024 ಉದ್ಘಾಟಿಸಿ ಮಾತನಾಡಿದರು.

ಮಹಿಳೆಯರು ಸಾಂಸ್ಕೃತಿಕ, ಸಾಮಾಜಿಕ, ಸಂಘಟಿತ, ರಾಜಕೀಯ, ಸ್ವಾವಲಂಬಿಯಾಗಿ ಮುನ್ನೆಲೆಗೆ ಬರುವ ಮೂಲಕ ಸಮುದಾಯದ ಏಳಿಗೆಯ ಕೇಂದ್ರವಾಗಬೇಕು. ಮಹಿಳಾ ಸಮಾವೇಶ ಆಯೋಜಿಸಿ ರಾಜ್ಯ, ರಾಷ್ಟ್ರಮಟ್ಟದಲ್ಲಿ ಸಂಘಟಿತ ಶಕ್ತಿಯಾಗಿ ಹೊರಹೊಮ್ಮಬೇಕು ಎಂದರು.

ಬೆಂಗಳೂರಿನ ಶೇಖರ್ ಆಸ್ಪತ್ರೆ ಸ್ತ್ರೀರೋಗ ತಜ್ಞೆ.ಡಾ. ಪುಷ್ಪಲತಾ ವಿ. ಐತಾಳ್, ಗಮಕ ವಿದುಷಿ ಯಾಮಿನಿ ಭಟ್, ಪಿಎಚ್.ಡಿ. ಪಡೆದ ಡಾ. ಸಹನ ಹೊಳ್ಳ ಅವರನ್ನು ಸನ್ಮಾನಿಸಲಾಯಿತು.

ಸಮ್ಮೇಳನಾಧ್ಯಕ್ಷೆ ಹಿರಿಯ ಸಂಶೋಧಕಿ ಡಾ. ಗಾಯತ್ರಿ ನಾವಡ, ಸಾಲಿಗ್ರಾಮ ಶ್ರೀ ಗುರುನರಸಿಂಹ ದೇಗುಲ ಅಧ್ಯಕ್ಷ ಡಾ. ಕೆ.ಎಸ್. ಕಾರಂತ್, ಪತ್ರಕರ್ತೆ ಡಾ.ಯು.ಬಿ. ರಾಜಲಕ್ಷ್ಮೀ, ಕೂಟ ಮಹಾಜಗತ್ತು ಕೇಂದ್ರ ಸಂಸ್ಥೆ ಅಧ್ಯಕ್ಷ ಎಚ್. ಸತೀಶ್ ಹಂದೆ, ಕೂಟ ಮಹಾಜಗತ್ತು ಸಾಲಿಗ್ರಾಮ ಅಂಗಸಂಸ್ಥೆ ಅಧ್ಯಕ್ಷ ಶ್ರೀಪತಿ ಅಧಿಕಾರಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಡುಪಿ ಜಿಲ್ಲಾ ಸಂಚಾಲಕಿ ಶ್ರೀಮತಿ ಶಾಂತಾ ಗಣೇಶ್ ಇದ್ದರು.



ಮಹಿಳಾ ವೇದಿಕೆ ಕೂಟ ಮಹಾಜಗತ್ತು ಸಾಲಿಗ್ರಾಮ ಅಧ್ಯಕ್ಷೆ ಯಶೋದಾ ಸಿ. ಹೊಳ್ಳ ಸ್ವಾಗತಿಸಿದರು. ಭಾರತಿ ವಿ.ಮಯ್ಯ, ವನಿತಾ ಉಪಾಧ್ಯ ಗಣ್ಯರನ್ನು ಪರಿಚಯಿಸಿದರು. ಸುಜಾತಾ ಬಾಯರಿ, ನಾಗರತ್ನ ಹೇರ್ಳೆ ನಿರೂಪಿಸಿ, ವಂದಿಸಿದರು.

ಸಾಲಿಗ್ರಾಮ ಶ್ರೀ ಗುರುನರಸಿಂಹ ದೇವರಿಗೆ ಪ್ರಾರ್ಥನೆ ಸಲ್ಲಿಸಿ, ವಿಷ್ಣುಸಹಸ್ರನಾಮ ಪಠಿಸಿ, ನಂತರ ಮೆರವಣಿಗೆ ಮೂಲಕ ಆಂಜನೇಯ ದೇಗುಲ ಸಂದರ್ಶಿಸಲಾಯಿತು. ಭರತನಾಟ್ಯ, ಕೋಲಾಟ, ತಾಳದೊಂದಿಗೆ ಅತಿಥಿಗಳನ್ನು ಬರಮಾಡಿಕೊಳ್ಳಲಾಯಿತು. ಐಸಿರಿ ಸಭೆಯನ್ನು ವಿಶಿಷ್ಟವಾಗಿ ಉದ್ಘಾಟನೆಯು ಅತ್ಯಂತ ವಿಶಿಷ್ಟವಾಗಿ ಮೂಡಿಬಂದಿತು.

ಬ್ರಾಹ್ಮಣ ವಧು ವರ ಕೇಂದ್ರ
BRAHMIN MATRIMONIAL
Mahathi Matrimonial
ಮಹತಿ ಮ್ಯಾಟ್ರಿಮೋನಿಯಲ್
ಸೂಕ್ತ ಪ್ರೊಫೈಲ್ ಗಳಿಲ್ಲದಿದ್ದರೆ ಹಣ ಪಾವತಿಸುವ ಅಗತ್ಯವಿಲ್ಲ
ನಮ್ಮಲ್ಲಿ
21 ರಿಂದ 48 ವರ್ಷದ ವಧುಗಳು
ಮತ್ತು
24 ರಿಂದ 55 ವರ್ಷದ ವರಗಳ
FIRST / SECOND MARRIAGE
ನ ಮಾಹಿತಿಯನ್ನು ಹೊಂದಿದ್ದೇವೆ
www,mahathimatrimonial.com
BENGALURU
VIJAYNAGAR CLUB ROAD
9741111173

## ವಿ. ವೆಂಕಟೇಶ್



ಬೆಂಗಳೂರಿನ ಎಂ.ಎ.ಎಸ್. ವಿದ್ಯಾಸಾಗರ ಪ್ರೊ. ಎಂ.ಪಿ.ಎಲ್. ಶಾಸ್ತ್ರಿ ಪಿ.ಯು. ಕಾಲೇಜಿನ ವಿದ್ಯಾರ್ಥಿ **ವಿ. ವೆಂಕಟೇಶ್** ಎಂಬ ವಿದ್ಯಾರ್ಥಿಯು 2023–24ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ. (ವಾಣಿಜ್ಯ 600ಕ್ಕೆ 593)ಯಲ್ಲಿ ರಾಜ್ಯಕ್ಕೆ 5ನೇ ರ್‍ಯಾಂಕ್‌ನ್ನು ಪಡೆದಿರುತ್ತಾನೆ. ವಿದ್ಯಾರ್ಥಿಗೆ ಮಹಾಸಭೆಯ ಅಭಿನಂದನೆಗಳು.

## ಶಾರ್ವರಿ ಎನ್. ಪ್ರಸಾದ್



ಬೆಂಗಳೂರಿನ ಪದ್ಮನಾಭನಗರದ ನಿವಾಸಿಗಳು, ಮಹಾಸಭೆಯ ಸದಸ್ಯರೂ ಆದ ಶ್ರೀ ಟಿ.ಎಸ್. ನಂಜುಂಡ ಪ್ರಸಾದ್ ಮತ್ತು ಶ್ರೀಮತಿ ಟಿ.ಎಸ್. ಅನುರಾಧ ಅವರ ಪುತ್ರಿ ಚಿ॥ ಶರ್ವಾಣಿ ಎನ್. ಪ್ರಸಾದ್ ರವರು ಯಲಚೇನಹಳ್ಳಿಯ ಜ್ಯೋತಿ ಕೇಂದ್ರೀಯ ವಿದ್ಯಾಲಯದಲ್ಲಿ ಎಸ್.ಎಸ್.ಎಲ್.ಸಿ. (ಸಿ.ಬಿ.ಎಸ್.ಇ) ಬೋರ್ಡ್ ಪರೀಕ್ಷೆಯಲ್ಲಿ 95.20 ಶೇಕಡಾವಾರು ಅಂಕಗಳನ್ನು ಪಡೆದು ಉತ್ತೀರ್ಣರಾಗಿದ್ದಾರೆ. **ಶರ್ವಾಣಿ ಎಸ್. ಪ್ರಸಾದ್**ರವರಿಗೆ ಅಭಿನಂದನೆಗಳು.

ಜಾಹಿರಾತು

## ಪೂರ್ಣಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

**ಶುಭಾಶಯಗಳೊಂದಿಗೆ**



ನಂ. 552, 'ಪೂರ್ಣಪ್ರಜ್ಞ ಸುವರ್ಣಭವನ',
ಉತ್ತರಹಳ್ಳಿ–ಕೆಂಗೇರಿ ಮುಖ್ಯರಸ್ತೆ
ಪೂರ್ಣಪ್ರಜ್ಞ ನಗರ, ಬೆಂಗಳೂರು–560 061.
ದೂ. ಸಂ. 080–26731335, 26731336

**ಬಡಾವಣೆ ವಿವರಗಳು :**

1. ಪೂರ್ಣಪ್ರಜ್ಞ ಬಡಾವಣೆ, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು-560 085
2. ಪೂರ್ಣ ಪ್ರಜ್ಞನಗರ, ಉತ್ತರಹಳ್ಳಿ, ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-560 061

### ಸಂಘದ ಆಡಳಿತ ಮಂಡಳಿ ಸದಸ್ಯರು

| | | | | | |
|---|---|---|---|---|---|
| ಹಯಗ್ರೀವಾಚಾರ್ | ಅಧ್ಯಕ್ಷರು | ಕೃಷ್ಣಮೂರ್ತಿ ಕೆ.ಎನ್. | ನಿರ್ದೇಶಕರು | ವೆಂಕಟೇಶ್ ಎಸ್.ವಿ. | ನಿರ್ದೇಶಕರು |
| ಅನಂತಸ್ವಾಮಿ ಎಸ್. | ಉಪಾಧ್ಯಕ್ಷರು | ವಿಶ್ವನಾಥ್ ಜಿ. | ನಿರ್ದೇಶಕರು | ರಾಮಯ್ಯ ಎಸ್.ಟಿ. | ನಿರ್ದೇಶಕರು |
| ಸುಧೀಂದ್ರ ಎಸ್.ಕೆ. | ನಿರ್ದೇಶಕರು | ಈಶ್ವರಿ ಜಿ.ಸಿ. | ನಿರ್ದೇಶಕರು | ಸಂಜೀವ್ ಕುಮಾರ್ ಎಸ್ | ನಿರ್ದೇಶಕರು |
| ಮೊಕಾಶಿ ಡಿ.ಎಚ್. | ನಿರ್ದೇಶಕರು | ರಾಧಮಣಿ ವಿ.ಕೆ. | ನಿರ್ದೇಶಕರು | | |

# ಆರ್ಷ ವಿದ್ಯಾಪೀಠಮ್, ದಿವ್ಯಕ್ಷೇತ್ರ ಹರಿಹರಪುರ.

## "ವಿಪ್ರ ವಿದ್ಯಾರ್ಥಿಗಳ ಗಮನಕ್ಕೆ"

ಅದಾಗಿ ದಿವ್ಯಕ್ಷೇತ್ರ ಹರಿಹರಪುರದಲ್ಲಿರುವ *'ಆರ್ಷ ವಿದ್ಯಾಪೀಠಮ್'*, ಶ್ರೀಮಠದ ವತಿಯಿಂದ ನಡೆಯುತ್ತಿದ್ದು, ಕಳೆದ ಅನೇಕ ವರ್ಷಗಳಿಂದ ನಮ್ಮ ಧರ್ಮ ಮತ್ತು ಸಂಸ್ಕೃತಿಯ ಸಂರಕ್ಷಣೆ ಮತ್ತು ಸಂಘಟನೆಗಾಗಿ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಿಕೊಂಡು ಬರುತ್ತಿದೆ.

ಈ ಸಂಸ್ಥೆಯ ಮೂಲಕ ಕಳೆದ ಅನೇಕ ವರ್ಷಗಳಿಂದ ವಿಪ್ರ ವಿದ್ಯಾರ್ಥಿಗಳಿಗೆ ಸಂಸ್ಕೃತ, ವೇದ, ವ್ಯಾಕರಣ ಮತ್ತು ಸಂಸ್ಕಾರ ಶಿಕ್ಷಣವನ್ನು ಕಲಿಸಿಕೊಡಲಾಗುತ್ತಿದೆ. 'ಆರ್ಷ ವಿದ್ಯಾಪೀಠದ' ಬರುವ ಶೈಕ್ಷಣಿಕ ವರ್ಷದ ದಾಖಲಾತಿಗಳು ಆರಂಭವಾಗಿದ್ದು, ಅರ್ಹ ವಿಪ್ರ ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

**ನಿಬಂಧನೆಗಳು :**

1) 5ನೇ ತರಗತಿ ಪರೀಕ್ಷೆ ಪಾಸ್ ಆಗಿರಬೇಕು.
2) ಉಪನಯನ ಸಂಸ್ಕಾರವನ್ನು ಹೊಂದಿರಬೇಕು.
3) ಮಕ್ಕಳಿಗೆ 6 ರಿಂದ 10 ನೇ ತರಗತಿಯವರೆಗೆ ನಮ್ಮ ಸಂಸ್ಥೆಯ ಅತ್ಯುತ್ತಮವಾದ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲೇ ಉಚಿತ ಶಿಕ್ಷಣವನ್ನು ನೀಡಲಾಗುವುದು.
4) ಶಾಲಾ ಅವಧಿಗೆ ಮೊದಲು , ಶಾಲೆಯು ಬಿಟ್ಟ ನಂತರ, ಐದು ವರ್ಷಗಳ ಕಾಲ ಮಕ್ಕಳಿಗೆ ಸಂಸ್ಕೃತ , ವೇದ, ವ್ಯಾಕರಣ ಮತ್ತು ಸಂಸ್ಕಾರ ಶಿಕ್ಷಣವನ್ನು ನೀಡಲಾಗುವುದು.
5) ಪ್ರಶಾಂತ ಪರಿಸರದಲ್ಲಿ , ಸ್ವಚ್ಛವಾದ ವಾತಾವರಣದಲ್ಲಿ , ಮಕ್ಕಳಿಗೆ ಊಟ ಮತ್ತು ವಸತಿ ಉಚಿತವಾಗಿರುತ್ತದೆ.
6) ಆಸಕ್ತ ಮಕ್ಕಳು ಮೇ 5 ರ ಒಳಗೆ ಅರ್ಜಿಯನ್ನು ಸಲ್ಲಿಸಬೇಕು. ಸಂದರ್ಶನವನ್ನು ಮಾಡಿ, ಮಕ್ಕಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು.
7) ಮೊದಲು ನೊಂದಾವಣೆ ಮಾಡಿಕೊಂಡವರಿಗೆ ಆದ್ಯತೆ ನೀಡಲಾಗುವುದು.

**ಅರ್ಜಿಯನ್ನು ಪಡೆಯಲು ಸಂಪರ್ಕಿಸಿ....**
**9449032007 / 9448043889**

ಅಧ್ಯಕ್ಷರು,
**ಆರ್ಷ ವಿದ್ಯಾಪೀಠಮ್.**
ದಿವ್ಯಕ್ಷೇತ್ರ ಹರಿಹರಪುರ.

# ಬೆಂಗಳೂರು ಸಿಟಿ ಪೋಲೀಸ್ (ಸಂಚಾರಿ ಉಸ್ತುವಾರಿ ಸಂಸ್ಥೆ)

ಟ್ರಾಫಿಕ್ ವಾರ್ಡನ್ ಸಂಸ್ಥೆ, ಸರ್ಕಾರಿ ಆದೇಶದ ಅಡಿಯಲ್ಲಿ, 1985ರಲ್ಲಿ ಸ್ಥಾಪಿತವಾದ ಸ್ವಯಂ ಸೇವಾ ಸಂಸ್ಥೆ. ಈ ಸಂಸ್ಥೆಯ ಧ್ಯೇಯ 'ರಸ್ತೆ ಸುರಕ್ಷತೆ'. ಇದನ್ನು ಸಾಧಿಸಲು ಸಂಸ್ಥೆಯಲ್ಲಿರುವ ಅಂದಾಜು ಎಂಟುನೂರು ಅಧಿಕಾರಿಗಳು ಟ್ರಾಫಿಕ್ ಪೊಲೀಸರ ಜೊತೆ ಹೆಗಲಿಗೆ ಹೆಗಲು ಕೊಟ್ಟು ವಾಹನ ಮತ್ತು ಜನರ ನಿಯಂತ್ರಣ ಮಾಡುತ್ತಾರೆ. ವಾರಕ್ಕೆ ನಾಲ್ಕರಿಂದ ಐದು ಗಂಟೆಗಳ ಕಾಲ ವಾಹನ ದಟ್ಟಣೆಯಿರುವ ದಿನದ ಬೆಳಿಗ್ಗೆ ಮತ್ತು ಸಂಜೆಯ ಸಮಯ, ಯಾವುದೇ ಸಂಭಾವನೆ ಅಥವಾ ಪ್ರತಿಫಲದ ಅಪೇಕ್ಷೆ ಇಲ್ಲದೆ, ಕಾರ್ಯ ನಿರ್ವಹಿಸುತ್ತಾರೆ. ತಿಂಗಳಿಗೊಮ್ಮೆ ಪೆರೇಡ್ (ಕವಾಯತು) ನಲ್ಲಿ ಭಾಗವಹಿಸುತ್ತಾರೆ. ಶಾಲಾ–ಕಾಲೇಜು, ಸಂಘ ಸಂಸ್ಥೆಗಳಿಗೆ ಭೇಟಿ ಕೊಟ್ಟು, ರಸ್ತೆ ಸುರಕ್ಷತೆಯ ಬಗ್ಗೆ ಮಾಹಿತಿ ನೀಡಿ ಜಾಗೃತಿ ಮೂಡಿಸುತ್ತಾರೆ. ಬೆಂಗಳೂರಿನ ಇಚ್ಛೆಯುಳ್ಳ ನಾಗರಿಕರು ಈ ಸಂಸ್ಥೆಗೆ ಸೇರಬಹುದಾಗಿದೆ.

**ಅರ್ಹತೆ :**

1. ಅಭ್ಯರ್ಥಿಗಳು ಬೆಂಗಳೂರಿನ ನಿವಾಸಿಗಳಾಗಿರಬೇಕು.
2. ಅಭ್ಯರ್ಥಿಗಳು ಕನಿಷ್ಠ ಪಿ.ಯು.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
3. ಅಭ್ಯರ್ಥಿಗಳು (ಆದಾಯಕ್ಕೆ) ಉದ್ಯಮಿ ಅಥವಾ ಉದ್ಯೋಗಸ್ಥರಾಗಿರಬೇಕು.
4. ಅಭ್ಯರ್ಥಿಗಳು 25 ವರ್ಷಗಳಿಂದ 55 ವರ್ಷದವರಾಗಿರಬೇಕು.
5. ಅಭ್ಯರ್ಥಿಗಳಿಗೆ ಯಾವುದೇ ಕ್ರಿಮಿನಲ್ ಹಿನ್ನೆಲೆ ಇರಬಾರದು.

ಸಂಸ್ಥೆಯನ್ನು ಸೇರಲು ಇಚ್ಛಿಸುವವರು
www.bcptwo.com ಲಾಗಿನ್ ಆಗಿ ಅಥವಾ
9900024950ಗೆ ಕರೆ ಮಾಡಿ ಸಂಪರ್ಕಿಸಬಹುದು.

**ಸಿ.ವಿ. ಮುರಳೀಧರ್**
ಚೀಫ್ ಟ್ರಾಫಿಕ್ ವಾರ್ಡನ್
BCP TWO / 7760281600

# ಶ್ರದ್ಧಾಂಜಲಿ

## ದಿ|| ಹೊ. ನಾ. ಹಿರಿಯಣ್ಣ ಸ್ವಾಮಿ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಮಾಜಿ ಪ್ರಧಾನ ಕಾರ್ಯದರ್ಶಿಗಳು, ರಾಜ್ಯ ಉಪಾಧ್ಯಕ್ಷರು, ವಿಪ್ರ ಸಮುದಾಯದ ಮುಂಚೂಣಿ ನಾಯಕರು ಆದ ಶ್ರೀ ಹೊ. ನಾ. ಹಿರಿಯಣ್ಣ ಸ್ವಾಮಿ ಅವರು ದಿನಾಂಕ 20.05.2024 ರಂದು ನಿಧನರಾಗಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ವಿಪ್ರ ಸಮುದಾಯದ ಪರ ಅವರಿಗಿದ್ದ ಕಾಳಜಿ ಬಣ್ಣಿಸಲಾತೀತ. ಸರಿಸುಮಾರು ಐದು ದಶಕಗಳಿಂದ ಸತತವಾಗಿ ಸಮಾಜದ ಸಂಘಟನೆಗೆ ತಮ್ಮನ್ನು ತಾವು ತೊಡಗಿಸಿಕೊಂಡು ವಿಪ್ರರ ಕುಂದುಕೊರತೆಗಳಿಗೆ ದನಿಯಾಗಿ ವಿಪ್ರ ಸಮಾಜದ ಶ್ರೇಯೋಭಿವೃದ್ಧಿಗೆ ಅಪಾರ ಸೇವೆ ಸಲ್ಲಿಸಿರುತ್ತಾರೆ. ಅವರ ಅಗಲಿಕೆ ನಾಡಿನ ಸಮಸ್ತ ವಿಪ್ರ ಸಮುದಾಯಕ್ಕೆ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸಂಘಟನೆಗೆ ತುಂಬಲಾರದ ನಷ್ಟ, ಈ ಸಂಧರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗೂ ಮಹಾಸಭಾದ ಸಮಸ್ತ ಪದಾಧಿಕಾರಿಗಳು ಮೃತರ ಆತ್ಮಕ್ಕೆ ಸದ್ಗತಿ ದೊರೆಯಲಿ ಎಂದು ಪ್ರಾರ್ಥಿಸುತ್ತ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತಾರೆ.

## ದಿ|| ಎನ್. ಗೋಪಿನಾಥ್

ಬ್ರಾಹ್ಮಣ ಸಂಘ, ಟಿ. ದಾಸರಹಳ್ಳಿ (ರಿ.) ಸಂಸ್ಥೆಯ ಹಿರಿಯ ಸದಸ್ಯರೂ, ಸಂಘದ ಸಂಸ್ಥಾಪಕರಲ್ಲಿ ಒಬ್ಬರೂ, ನಿಕಟಪೂರ್ವ ಕಾರ್ಯಾಧ್ಯಕ್ಷರೂ, ಹಾಲಿ ಗೌರವ ಅಧ್ಯಕ್ಷರೂ ಆಗಿದ್ದ ಶ್ರೀ ಎನ್. ಗೋಪಿನಾಥ್‌ರವರು (93) ದಿನಾಂಕ 01.04.2024ರಂದು ವಯೋಸಹಜ ಅನಾರೋಗ್ಯದಿಂದ ತಮ್ಮ ಸ್ವಗೃಹದಲ್ಲಿ ನಿಧನರಾದರು ಎಂದು ತಿಳಿಸಲು ವಿಷಾದಿಸುತ್ತೇವೆ. ಸಂಘದ ಕಾರ್ಯಕಾರಿಣಿ ಸಮಿತಿಯ ಸದಸ್ಯರು ಸಭೆ ಸೇರಿ ಮೃತರು ಸಂಘಕ್ಕೆ ಸಲ್ಲಿಸಿರುವ ಸೇವೆಯನ್ನು ಸ್ಮರಿಸಿ, ಸಂಘದಿಂದ ಮೃತರ ಆತ್ಮಕ್ಕೆ ಶಾಂತಿ ಕೋರಿದರು. ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾಗೂ ಅವರ ಬಂಧು-ಬಳಗದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ವೇದಮಾತೆ ಗಾಯತ್ರಿ ದೇವಿಯು ನೀಡಲೆಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯು ಪ್ರಾರ್ಥಿಸುತ್ತದೆ.



## ದಿ|| ಡಿ. ವಾಸುದೇವರಾವ್



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರೂ, ಹಿಂದಿನ ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರೂ ಆದ ಶ್ರೀ ಡಿ. ವಾಸುದೇವರಾವ್‌ರವರು ದಿನಾಂಕ 21.05.2024ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರ ಆತ್ಮಕ್ಕೆ ಶಾಂತಿ ದೊರಕಲೆಂದು ಹಾಗೂ ಅವರ ಕುಟುಂಬ ವರ್ಗಕ್ಕೆ, ಬಂಧು-ಮಿತ್ರರಿಗೆ ದುಃಖ ಭರಿಸುವ ಶಕ್ತಿಯನ್ನು ವೇದಮಾತೆ ಗಾಯತ್ರಿ ದೇವಿಯು ಅನುಗ್ರಹಿಸಲೆಂದು ಭಗವಂತನಲ್ಲಿ ಮಹಾಸಭೆಯು ಪ್ರಾರ್ಥಿಸುತ್ತದೆ.

# ವಿಪ್ರ ಸಮಾಜದ ಹಿರಿಯಣ್ಣ – ಹೊ.ನಾ. ಹಿರಿಯಣ್ಣಸ್ವಾಮಿಗಳ ನಿರ್ಗಮನ



ಇದು ದಶಕಗಳ ಕಾಲ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸಂಘಟನೆ ಎಂಬ ಬಂಡಿಯನ್ನೆಳೆದು, ಇನ್ನು ನಿಮ್ಮ ಜವಾಬ್ದಾರಿ ಎಂದು ಯಾರಿಗೂ ತಿಳಿಯದ ರೀತಿಯಲ್ಲಿ ಎದ್ದು ನಡೆದಿದ್ದಾರೆ ಹೊ.ನಾ. ಹಿರಿಯಣ್ಣಸ್ವಾಮಿ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಗೆ ಕಾಲದಿಂದ ಕಾಲಕ್ಕೆ ಅನೇಕಾನೇಕ ಮಹಾನುಭಾವರು ತಮ್ಮಿಂದಾದಷ್ಟು ಸಹಾಯವನ್ನು ಮಾಡಿರುತ್ತಾರೆ. ಕೆಲವರು ಪ್ರತ್ಯಕ್ಷವಾಗಿ, ಕೆಲವರು ಪರೋಕ್ಷವಾಗಿ ಮಹಾಸಭೆಯ ಧ್ಯೇಯಕ್ಕೆ ದನಿಯಾಗಿ ಹಾಗೂ ಮಹಾಸಭೆಯ ಆಶೋತ್ತರಗಳಿಗೆ ಸ್ಪಂದಿಸಿದ್ದಾರೆ. ಆದರೆ ಹಿರಿಯಣ್ಣಸ್ವಾಮಿಯವರಿಗೆ ಮಹಾಸಭೆಯೇ ಸರ್ವಸ್ವ. ಕಾಯ, ವಾಚ, ಮನಸಾ ಅವರು ತಮ್ಮನ್ನು ತಾವು ಮಹಾಸಭೆಯ ಧ್ಯೇಯೋದ್ದೇಶಕ್ಕಾಗಿ ಸಮರ್ಪಿಸಿಕೊಂಡಿದ್ದರು.

ಹೆಸರಿಗೆ ತಕ್ಕಂತೆ ಹಿರಿಯಣ್ಣಸ್ವಾಮಿಗಳು ಮಹಾಸಭೆಯ ಹಿರಿಯಣ್ಣನಂತೆ ಅಂದಿನ ತಲೆಮಾರಿಗೂ ಇಂದಿನ ತಲೆಮಾರಿಗೂ ಸಂಪರ್ಕದ ಕೊಂಡಿಯಾಗಿದ್ದರು. ಯುವಕರಿಂದ ಹಿಡಿದು ಅವರ ಸಮಕಾಲೀನದವರೆಗೆ ಎಲ್ಲರನ್ನೂ ಮಹಾಸಭೆಯ ಕೆಲಸ ಕಾರ್ಯಗಳಲ್ಲಿ ತೊಡಗುವಂತೆ ಮಾಡುವ ಪರಿ ನಿಜಕ್ಕೂ ಬಣ್ಣಸಲಾತೀತ, ಹಿರಿಯಣ್ಣಸ್ವಾಮಿಗಳಲ್ಲಿ ಒಬ್ಬ ಅದ್ಭುತವಾದ ಆಡಳಿತಗಾರನಿರಬೇಕಾದ ಅಷ್ಟೂ ಗುಣಲಕ್ಷಣಗಳಿದ್ದವು. ಚಿತ್ರರಂಗದಲ್ಲಿ "Method Actor ಗಳಿರುತ್ತಾರೆ". ಅದೇ ರೀತಿ ಹಿರಿಯಣ್ಣಸ್ವಾಮಿಗಳ ಕೆಲಸವೂ ಕ್ರಮಬದ್ಧ. ಮಹಾಸಭೆಯ ಯಾವುದೇ ವಿಷಯವಿರಲಿ ಉತ್ಸಾಹದ ಚಿಲುಮೆಯಂತೆ ಮುನ್ನುಗ್ಗುತ್ತಿದ್ದರು.

ಮಹಾಸಭೆಯ ಯಾವುದೇ ವಿಷಯವನ್ನು ಕೇಳಿ ಅವರ ಬಳಿ ಸ್ಪಷ್ಟ ಉತ್ತರವಿರುತ್ತಿತ್ತು. ಅದು ವಿಪ್ರ ಮಹಿಳಾ ವಸತಿ ನಿಲಯವನ್ನೇ ಏಕೆ ಕಟ್ಟಿದಿರಿ ಎಂದು ಕೇಳಿ ಅಥವಾ ಸಮ್ಮೇಳನಗಳನ್ನು ಕುಂದಾಪುರದಲ್ಲಿ ಹಾಗೂ ಬೆಳಗಾವಿಯಲ್ಲಿ ಏಕೆ ಮಾಡಿದಿರಿ ಎಂದು ಕೇಳಿ ಬಹಳ ಅರ್ಥಪೂರ್ಣವಾಗಿ ವಿವರಿಸುತ್ತಿದ್ದರು. ಮಹಾಸಭೆಯ ಪ್ರತಿ ಹೆಜ್ಜೆಯ ಪೂರ್ವಾಪರ ಅವರಿಗೆ ತಿಳಿದಿರುತ್ತಿತ್ತು. ಯಾವ ಜಿಲ್ಲೆಯಲ್ಲಿ ಯಾರನ್ನು ಸಂಪರ್ಕಿಸಬೇಕು ಮತ್ತು ಯಾರಿಗೆ ಯಾವ ಕೆಲಸವನ್ನು ವಹಿಸಬೇಕೆಂಬ ಗುಣಗ್ರಾಹಿತ್ವವು ಅತ್ಯಂತ ಸಹಜವೆಂಬಂತೆ ಅವರಲ್ಲಿ ಕಾಣಬಹುದಾಗಿತ್ತು. ಮಹಾಸಭೆಯ ಪ್ರಪ್ರಥಮ ಸಂಸ್ಥಾಪಕ ಅಧ್ಯಕ್ಷರಾದ ಮಾಸ್ಟರ್ ಹಿರಿಯಣ್ಣಯ್ಯನವರಿಂದ ಈಗಿನ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರಿಗೂ ಸಲಹೆ ಸೂಚನೆಗಳನ್ನು ಕೊಟ್ಟು ಮಹಾಸಭೆಯ ಕಾರ್ಯಕ್ರಮಗಳು ಸರಳ ಸುಂದರವಾಗುವಂತೆ ನೋಡಿಕೊಳ್ಳುವುದರಲ್ಲಿ ಹಿರಿಯಣ್ಣಸ್ವಾಮಿಗಳದು ಎತ್ತಿದ ಕೈ.

ಮಹಾಸಭೆ ಹೊರತುಪಡಿಸಿ ಹತ್ತು ಹಲವು ಸಂಸ್ಥೆಗಳೊಂದಿಗೆ ಅವರ ಒಡನಾಟವಿತ್ತು. ಹೋದಲೆಲ್ಲಾ ಅವರದೇ ಆದ ಛಾಪನ್ನು ಬಿಟ್ಟು ಹೋಗುತ್ತಿದ್ದರು. ಹಾಗೆ ನೋಡಿದರೆ ರಾಜಕೀಯದಲ್ಲಿ ಅವರ ವ್ಯಕ್ತಿತ್ವಕ್ಕೆ ತಕ್ಕನಾದ ಹುದ್ದೆಗಳು ಸಿಗಲಿಲ್ಲ ಎಂಬಂತೆ ಭಾಸವಾಗುತ್ತದೆ. ಆದರೆ ಎಲ್ಲವೂ ಭಗವಂತನ ಇಚ್ಛೆ. ಅವನಿಗೂ ಅವರು ವಿಪ್ರ ಸಂಘಟನೆಯಲ್ಲಿಯೇ ತೊಡಗಿಕೊಳ್ಳುವುದು ಇಷ್ಟವಾಗಿತ್ತೇನೋ. ಹೀಗೆ ಸದಾ ಕ್ರೀಯಾಶೀಲರಾಗಿದ್ದ ಅಪಾರ ಜೀವನ ಪ್ರೀತಿಯನ್ನು ಹೊಂದಿದ್ದ ಹಿರಿಯಣ್ಣಸ್ವಾಮಿಗಳು ಏನನ್ನು ಮಾಡಲಾಗದೆ ಸುಮ್ಮನೆ ಕುಳಿತುಕೊಳ್ಳುವಂತಹ ದಿನಗಳನ್ನು ನೋಡುವುದಕ್ಕಿಂತ ಹೋಗುವುದೇ ಲೇಸು ಎಂದು ಭಾವಿಸಿ ಬದುಕಿನ ಕೊನೆಯ ಅಧ್ಯಾಯಕ್ಕೆ ಹಿನ್ನುಡಿಯನ್ನು ಬರೆಯದೇ ಮಹಾಸಭೆಯ ಅಂಗಳದಲ್ಲೊಂದು ನಿರ್ವಾತ ಸೃಷ್ಟಿಸಿ ಎದ್ದು ಹೋಗಿದ್ದಾರೆ. ಇಂದು ಹಿರಿಯಣ್ಣಸ್ವಾಮಿಗಳು ನಮ್ಮೊಂದಿಗೆ ಇಲ್ಲದಿರಬಹುದು, ಆದರೆ ಅವರ ವ್ಯಕ್ತಿತ್ವದ ಛಾಪು ಸದಾ ಅಮರ.

**ಕಾರ್ತೀಕ್ ಎಸ್. ಬಾಪಟ್**
ಸಂಘಟನಾ ಕಾರ್ಯದರ್ಶಿ
ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

# ಶ್ರೀ ಶಂಕರಾಚಾರ್ಯರು

– ವಿದ್ವಾನ್ ಮಂಜುನಾಥ ಭಟ್ಟ್



ಸರಿಸುಮಾರು 1200–1300 ವರ್ಷಗಳ ಹಿಂದೆ ಇಂದು ಕೇರಳ ರಾಜ್ಯದ ಕಾಲಟಿ ಎಂಬ ಗ್ರಾಮದಲ್ಲಿ ಶಿವಗುರು ಮತ್ತು ಆರ್ಯಾಂಬಾ ಎಂಬ ಸದ್ಗಹಸ್ಥರು ಶಿವನ ಪೂಜೆಯನ್ನು ಮಾಡುತ್ತಾ, ತಮ್ಮ ಜೀವನ ನಿರ್ವಹಿಸುತ್ತಿದ್ದರು. ಅವರಿಗೆ ಅನೇಕ ವರ್ಷಗಳ ಕಾಲ ಸಂತಾನ ಇಲ್ಲದೆ ದುಃಖಿಸುತ್ತಿದ್ದರು. ಪ್ರತಿನಿತ್ಯ ಪರಶಿವನಲ್ಲಿ ತಮ್ಮ ಅರಿಕೆಯನ್ನು ಬಿನ್ನವಿಸುತ್ತಿದ್ದರು. ಹೀಗಿರುವಾಗ ಒಮ್ಮೆ ಪರಮೇಶ್ವರನೇ ಆ ದಂಪತಿಗಳ ಕನಸಿನಲ್ಲಿ ಬಂದು ನಾನೇ ನಿಮ್ಮ ಪುತ್ರನಾಗಿ ಬರುತ್ತೇನೆ, ಆದರೆ ಅಲ್ಪಾಯುಷ್ಯವನ್ನು ಹೊಂದಿರುತ್ತೇನೆ ಎಂದನು. ಬಹಳ ಸಂತೋಷಪಟ್ಟ ಆ ದಂಪತಿಗಳಿಗೆ ಪರಮೇಶ್ವರನ ಮೇಲೆ ಅಪಾರ ನಂಬಿಕೆ ಇತ್ತು. ಅದಕ್ಕನುಗುಣವಾಗಿ ವೈಶಾಖ ಶುದ್ಧ ಪಂಚಮಿಯಂದು ಶಿವನ ಅವತಾರ ಆ ಸದ್ಗೃಹಸ್ಥರಲ್ಲಿ ಆಯಿತು. ಮಗುವಿಗೆ ಶಂಕರ ಎಂಬ ನಾಮಕರಣವನ್ನು ಮಾಡಿದರು. ಶಂಕರನೂ ಕೂಡ ತಂದೆತಾಯಿ ದೇವರುಗಳಲ್ಲಿ ಅಪಾರ ಶ್ರದ್ಧೆ, ಭಕ್ತಿ, ಗೌರವಗಳನ್ನು ಹೊಂದಿದ್ದನು.

ಶಂಕರನ ಬಾಲ್ಯದಲ್ಲಿ ಒಮ್ಮೆ ಅವನ ತಂದೆ ಶಿವಗುರುವಿಗೆ ಜ್ವರಬಾಧೆ ಕಾಣಿಸಿತು. ತಾನು ನಿತ್ಯ ಪೂಜೆ ಮಾಡುವ ಶಿವನ ಹತ್ತಿರ ಹೊಗುವುದಕ್ಕೂ ಸಾಧ್ಯವಾಗಲಿಲ್ಲ. ಆಗ ಬಾಲ ಶಂಕರನಿಗೆ ಶಿವಪೂಜೆ ಮಾಡಲು ಹೇಳಿದನು. ಶ್ರದ್ಧಾ ಭಕ್ತಿಯಿಂದ ಬಾಲ ಶಂಕರ ಶಿವಪೂಜೆಯಲ್ಲಿ ತಲ್ಲೀನನಾದ. ತಾನು ಕೊಟ್ಟ ನೈವೇದ್ಯದ ಹಾಲನ್ನು ಶಿವ ಸ್ವೀಕರಿಸುವ ತನಕ ತಾನು ಮನೆಗೆ ಹೋಗುವುದಿಲ್ಲ ಎಂದು ಶಿವಲಿಂಗದ ಮುಂದೆಯೇ ಕುಳಿತುಬಿಟ್ಟ. ಆತನ ಭಕ್ತಿಗೆ ಮೆಚ್ಚಿದ ಶಿವ ಸ್ವತಃ ಬಂದು ಆ ನೈವೇದ್ಯವನ್ನು ಸ್ವೀಕರಿಸಿದ. ಈ ಸಂಗತಿ ತಿಳಿದ ದಂಪತಿಗಳಿಗಷ್ಟೇ ಅಲ್ಲ, ಸುತ್ತಮುತ್ತಲಿನ ಜನರಿಗೂ ಆಶ್ಚರ್ಯವಾಯಿತು. ಅಲ್ಲಿಂದ ಶಂಕರರ ಮೇಲೆ ಎಲ್ಲರಿಗೂ ಅಪಾರ ಅಭಿಮಾನ ಹಾಗೂ ಗೌರವಗಳು ಉಂಟಾದವು.

ಬಾಲ್ಯದಲ್ಲಿಯೇ ಅಂದರೆ ಶಂಕರರ 3ನೇ ವಯಸ್ಸಿಗೆ ತಂದೆ ಮಗನಿಗೆ ಕೃಷ್ಣಯಜುರ್ವೇದವನ್ನು ಪಾಠ ಮಾಡುತ್ತಿದ್ದರು. ಅತ್ಯಂತ ಚುರುಕಾಗಿದ್ದ ಬಾಲಕ ಶಂಕರ ಶ್ರದ್ಧೆಯಿಂದ ವೇದಾಧ್ಯಯನವನ್ನು ಮಾಡುತ್ತ ಇದ್ದರು. ಶಂಕರನಿಗೆ ಉಪನಯನ ಸಂಸ್ಕಾರವೂ ನೇರವೇರಿತು. ಆದರೆ ಶಂಕರನಿಗೆ ನಾಲ್ಕನೇ ವರ್ಷ ಮುಗಿಯುತ್ತಿರುವಾಗಲೆ ತಂದೆ ಮರಣ ಹೊಂದಿದರು. ತಾಯಿ ಆರ್ಯಾಂಬಾಳಿಗೆ ಮಗನ ವಿದ್ಯಾಭ್ಯಾಸ ಹಾಗೂ ಸಂಸಾರದ ಜವಾಬ್ದಾರಿಗಳು ಬಿದ್ದವು. ಧೈರ್ಯಗೆಡದ ತಾಯಿ ಮಗನ ವಿದ್ಯಾಭ್ಯಾಸ ಮಾಡಿಸಲು ಬಹಳ ಶ್ರಮ ವಹಿಸುತ್ತಿದ್ದಳು. ಗುರು ಗೋವಿಂದ ಭಗವತ್ಪಾದರಲ್ಲಿ ವೇದಾಧ್ಯಯನ ಶಾಸ್ತ್ರ ಪಾಠಗಳು ಮುಂದುವರಿಯಿತು.

ತಾಯಿ ದಿನವೂ ಸ್ನಾನಕ್ಕೆ ಹೋಗುತ್ತಿದ್ದ ಪೂರ್ಣಾನದಿ ಮನೆಯಿಂದ ತುಸು ದೂರವಾಗಿತ್ತು. ಅದಕ್ಕಾಗಿ ನದಿಯನ್ನು ಭಕ್ತಿಯಿಂದ ಪ್ರಾರ್ಥಿಸಿ, ತನ್ನ ಮನೆಯ ಸಮೀಪಕ್ಕೆ ನದಿಯನ್ನು ತಿರುಗಿಸಿದ ಮಹಾನ್ ತಪಸ್ವಿ ಶಂಕರರು. ತಮ್ಮ ಬಾಲ್ಯದಲ್ಲಿಯೇ ಸನ್ಯಾಸ ಸ್ವೀಕರಿಸುವ ಇಚ್ಛೆಯಿದ್ದ ಶಂಕರರಿಗೆ ತಾಯಿ ಅನುಮತಿ ಕೊಡುವುದಿಲ್ಲ ಎಂಬ ಅರಿವಿತ್ತು. ಅದಕ್ಕಾಗಿ ನದಿಯಲ್ಲಿ ಸ್ನಾನ ಮಾಡುವಾಗ "ಮೊಸಳೆಯೊಂದು ತನ್ನ ಕಾಲನ್ನು ಹಿಡಿದೆಳೆಯುತ್ತಿದೆ, ಹೇ ತಾಯಿ, ನೀನು ನನಗೆ ಸನ್ಯಾಸಕ್ಕೆ ಅನುಮತಿ ನೀಡಿದಲ್ಲಿ ನಾನು ಬದುಕುತ್ತೇನೆ" ಎಂದಾಗ ಮಗು ಸನ್ಯಾಸಿಯಾದರೂ ಬದುಕಿರುವನಲ್ಲ ಎಂಬ ಭಾವನೆಯಿಂದ ಸನ್ಯಾಸಕ್ಕೆ ಅನುಮತಿ ನೀಡಿದಳು ತಾಯಿ.

ಅಲ್ಲಿಂದ ಗುರುಗಳ ಅನ್ವೇಷಣೆಗಾಗಿ ಹೊರಟ ಶಂಕರರು ನರ್ಮದಾನದಿಯ ತೀರಕ್ಕೆ ಬಂದಾಗ ವ್ಯಾಸರ ಅವತಾರಿಗಳಾದ ಗೌಡಪಾದಾಚಾರ್ಯರು ಗುಹೆಯಲ್ಲಿ ತಪಸ್ಸು ಮಾಡುತ್ತಿದ್ದರು. ಅವರ ದರ್ಶನ ಮಾಡಿ ಅವರಿಂದ ಸನ್ಯಾಸ ಸ್ವೀಕಾರ ಮಾಡಿದರು.

ಬಾಲ್ಯದಲ್ಲಿಯೇ ಭಿಕ್ಷೆಗಾಗಿ ಹೊರಟ ಶಂಕರರು ವೃದ್ಧೆಯೊಬ್ಬಳು ಮನೆಯಲ್ಲಿ ಬೇರೇನೂ ಇಲ್ಲವೆಂದು ಕೊಟ್ಟ ನೆಲ್ಲಿಕಾಯಿಯನ್ನು ಸ್ವೀಕರಿಸಿ, ಮಹಾಲಕ್ಷ್ಮಿಯನ್ನು ಪ್ರಾರ್ಥಿಸಿ ಅವಳ ಮನೆಯಲ್ಲಿ ಸುವರ್ಣ ವೃಷ್ಠಿ ಸುರಿಯುವಂತೆ ಮಾಡಿದರು. ಇಂತಹ ವಿಶೇಷ ಸಾಮರ್ಥ್ಯಗಳನ್ನು ಕಂಡು ಅವರ ಪ್ರಭಾವ ಸುತ್ತಮುತ್ತಲ್ಲೆಲ್ಲ ಪಸರಿಸಿತ್ತು, ಆ ಪ್ರದೇಶದ ರಾಜನೂ ಕೂಡ ಅವರಲ್ಲಿ ಬಂದು ಅವರನ್ನು ಗೌರವಿಸಿ ಸತ್ಕರಿಸಿದ.

ಸ್ವತಃ ಪರಮಾತ್ಮನ ಅವತಾರಿಗಳಾಗಿದ್ದ ಗುರು ಗೌಡಪಾದರು ಸನ್ಯಾಸಾಶ್ರಮವನ್ನು ಕರುಣಿಸಿ ಅವರಿಗೆ ಶಾಸ್ತ್ರಾಭ್ಯಾಸವನ್ನು ಮಾಡಿಸಿದರು. ಬಾಲ್ಯದಲ್ಲಿಯೇ ವೇದಾಭ್ಯಾಸ ಹಾಗೂ ಶಾಸ್ತ್ರಾಭ್ಯಾಸವನ್ನು ಪೂರೈಸಿದ

ಶಂಕರರಿಗೆ ಗುರು ಗೌಡಪಾದರು ಧರ್ಮ ಪ್ರಸಾರವನ್ನು ಮಾಡಲು ಆಜ್ಞಾಪಿಸಿದಾಗ ಕಾಲ್ನಡಿಗೆಯಲ್ಲಿಯೇ ಸಮಗ್ರ ಭಾರತ ಪರ್ಯಟನೆಗೆ ಹೊರಟರು.

ಅವರ ಭಾರತ ಪ್ರವಾಸದ ಸಂದರ್ಭದಲ್ಲಿ ಸನಾತನ ಹಿಂದೂಧರ್ಮ ಬಹಳ ಸಂಕಷ್ಟಕ್ಕೆ ತುತ್ತಾಗಿ ಕರ್ಮದ ಪ್ರಭಾವದಿಂದ ನಲುಗಿ ಹೋಗಿತ್ತು. ಕರ್ಮದರ ಕಪಿಮುಷ್ಠಿಯಿಂದ ಪಾರಾಗಲು ಅನೇಕರು ಹಿಂದೂ ಧರ್ಮವನ್ನು ಬಿಟ್ಟು ಹೊರಟಿದ್ದರು. ಅದೇ ಸಮಯದಲ್ಲಿ ಬೌದ್ಧ ಹಾಗೂ ಜೈನ ಧರ್ಮವು ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ಅವರ ನಾಸ್ತಿಕತೆಯ ತತ್ವ ಜನರಿಗೆ ಬಹು ಅಪ್ಯಾಯಮಾನವಾಗಿತ್ತು. ಅದಕ್ಕಾಗಿ ಬಹಳ ಬೇಗ ಜನ ಆಕರ್ಷಿತರಾಗುತ್ತಿದ್ದರು. ಕರ್ಮಕಾಂಡದ ಪ್ರಭಾವದಿಂದ ಭಾರತದಲ್ಲಿ ಜನತೆ ಜಾತಿ, ಧರ್ಮ, ಪಂಗಡ ಇವುಗಳಲ್ಲಿ ಹರಿದು ಹಂಚಿಹೋಗಿ ಪರಸ್ಪರ ಅವಿಶ್ವಾಸ, ದ್ವೇಷ, ಅಸೂಯೆಗಳಿಂದ ಸಮಾಜದಲ್ಲಿ ಅಶಾಂತಿ ಮಡುಗಟ್ಟಿತ್ತು. ಶಂಕರರು ಸಮಾಜದಲ್ಲಿ ಪರಸ್ಪರ ಉಂಟಾದ ದ್ವೇಷ ಕಲಹಗಳನ್ನು ತೊಲಗಿಸಿ, ಪರಸ್ಪರ ವಿಶ್ವಾಸ ಶಾಂತಿ ಒಗ್ಗಟ್ಟು ಮೂಡಿಸಲು ಜ್ಞಾನಕಾಂಡದಿಂದಲೇ ಸಾಧ್ಯ. ಆದರೆ ಎಲ್ಲರೂ ಜ್ಞಾನಕಾಂಡಕ್ಕೆ ಅಧಿಕಾರಿಗಳಲ್ಲ ಎಂಬ ಕಾರಣಕ್ಕಾಗಿ ದೇವತೆಗಳ ಮೇಲೆ ಭಕ್ತಿ ಉಂಟಾಗಲು ಸ್ತೋತ್ರ, ಸಾಹಿತ್ಯ, ದೇವತಾ ಸ್ತೋತ್ರಾದಿಗಳನ್ನು ರಚಿಸಿ ಸಾಮಾನ್ಯ ಜನರಲ್ಲಿ ಭಕ್ತಿಭಾವಗಳು ಉಂಟಾಗುವಂತೆ ಮಾಡಿದರು. ಸ್ವಲ್ಪಮಟ್ಟಿಗೆ ಶಾಸ್ತ್ರ ಜ್ಞಾನವಿರುವವರಿಗಾಗಿ ಪ್ರಕರಣ ಗ್ರಂಥಗಳನ್ನು ರಚಿಸಿದರು. ಉತ್ತಮಾಧಿಕಾರಿಗಳಿಗಾಗಿ ಭಾಷ್ಯ ಗ್ರಂಥಗಳನ್ನು ರಚಿಸಿ, ಉಪದೇಶಿಸಿದರು. ತಾವು ಯಾತ್ರೆಗೆ ಹೋದಲ್ಲೆಲ್ಲ ಜನರನ್ನು, ವಿದ್ವಾಂಸರನ್ನು ಸೇರಿಸಿ ಶಾಸ್ತ್ರಾರ್ಥಗಳನ್ನು ವಿವರಿಸಿ ಜನರಲ್ಲಿರುವ ಸಂದೇಹಗಳನ್ನು ನಿವಾರಿಸಿ ಒಗ್ಗೂಡುವಂತೆ, ಪರಸ್ಪರ ವಿಶ್ವಾಸಗಳು ಮೂಡುವಂತೆ ಮಾಡಿದರು.

ಭಾರತ ಯಾತ್ರೆಯನ್ನು ಮುಗಿಸಿ ದಕ್ಷಿಣದ ಕಡೆಗೆ ಬರುವಾಗ ಈಗಿನ ಮಧ್ಯಪ್ರದೇಶ ಭಾಗದಲ್ಲಿರುವ ಮಾಹಿಸ್ಮಲೇ ಎಂಬ ಪಟ್ಟಣದಲ್ಲಿ ಮಂಡನ ಮಿಶ್ರರೆಂಬ ಪಂಡಿತರು ಕರ್ಮಕಾಂಡದಲ್ಲಿ ಅತ್ಯಂತ ಪರಾಕಾಷ್ಠತೆಯನ್ನು ಹೊಂದಿದ್ದರು. ಅವರ ಮನೆ ಸಂದರ್ಶಿಸಿ, ಅವರಲ್ಲಿ ವಾದ ಭಿಕ್ಷೆಯನ್ನು ಕೇಳಿ, ಅವರೊಡನೆ ವಾದ ಮಾಡಿ ಅವರನ್ನು ಸೋಲಿಸಿ, ಅವರನ್ನು ಶಿಷ್ಯರನ್ನಾಗಿ ಸ್ವೀಕರಿಸಿದರು. ಹೀಗೆ ಸಮಗ್ರ ಭಾರತವನ್ನು ಸಂದರ್ಶಿಸಿ ಅನೇಕ ಗುಡಿಗೋಪುರಗಳನ್ನು ಉದ್ಧರಿಸಿ ಜನರೆಲ್ಲ ಒಗ್ಗೂಡುವಂತೆ ಮಾಡಿದರು.

ಅಖಂಡ ಭಾರತದ ಕನಸನ್ನು ಕಂಡ ಶಂಕರರು ಭಾರತದ ನಾಲ್ಕು ದಿಕ್ಕುಗಳಲ್ಲಿ 4 ವೇದಗಳ ರಕ್ಷಣೆಗಾಗಿ ಅಮ್ನಾಯ ಪೀಠಗಳನ್ನು ಸ್ಥಾಪಿಸಿ ಅದರಲ್ಲಿ ತಮ್ಮ 4 ಜನ ಶಿಷ್ಯರನ್ನೇ ಪೀಠಾಧಿಕಾರಿಗಳನ್ನಾಗಿ ಮಾಡಿದರು. ಅಂದಿನಿಂದ ಇಂದಿನವರೆಗೂ ಆ ಪರಂಪರೆ ಅವಿಚ್ಛಿನ್ನವಾಗಿ ಮುಂದುವರೆದುಕೊಂಡು ಬಂದಿದೆ.

**ಅಷ್ಟವರ್ಷ ಚತುರ್ವೇದಿ ದ್ವಾದಶೇ ಸರ್ವಶಾಸ್ತ್ರಮ್**
**ಷೋಡಶೇ ಕೃತವಾನ್ ಭಾಷ್ಯಂ ದ್ವಾತ್ರಿಂಶತ್ ಮುನಿರಬ್ರವೇತ್**


ಸಂಧ್ಯಾ ಸುರಕ್ಷ ಟ್ರಸ್ಟ್,
ಜಿಲ್ಲಾ ಬ್ರಾಹ್ಮಣ ಮಹಾಸಭಾ (ರಿ).,

## ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧಾ ಕೇಂದ್ರ

ದೇವಯ್ಯನಹುಂಡಿ ಮುಖ್ಯರಸ್ತೆ, ಶ್ರೀರಾಂಪುರ, 2ನೇ ಹಂತ, ಮೈಸೂರು – 570 023

## ಹೊಸ ಆವಿಷ್ಕಾರದೊಂದಿಗೆ ನಿಮ್ಮ ಅನುಕೂಲಕ್ಕಾಗಿ

ತ್ರಿಮತಸ್ಥ ಬ್ರಾಹ್ಮಣ ಬಂಧುಗಳು, ಪೂರ್ವಿಕರ ಎಲ್ಲಾ ಶ್ರಾದ್ಧ ಕರ್ಮಾಧಿಗಳನ್ನು (ವೈದಿಕ) ಅಪರ, ಪೂರ್ವ, ಅಂತ್ಯೇಷ್ಠಿ ಕರ್ಮಾದಿಗಳನ್ನು ನುರಿತ ಆಯಾ ಪಂಗಡದ ಪುರೋಹಿತರಿಂದ, ಆಯಾ ಪಂಗಡದ ಅಡುಗೆಯೊಂದಿಗೆ ನುರಿತ ಅಡಿಗೆಯವರಿಂದ ನಡೆಸಲಾಗುವುದು ಹಾಗೂ ಬೆಳಗ್ಗೆ ಪ್ರಾತಃಕಾಲ 6.00 ರಿಂದ 6.30 ವೇದ ಪಠಣ, 6.30 ರಿಂದ 7.00 ವರೆಗೆ ಭಗವದ್ಗೀತಾ ಪಾರಾಯಣ, ಸಾಯಂಕಾಲ, ಸಂಧ್ಯಾವಂದನೆ, ಕಲಿಕೆ, ಪಾರಾಯಣ, ದೇವಿ ಶಾಕಂಭರಿಗೆ ಮಹಾಮಂಗಳಾರತಿ ಮತ್ತು ಸುಸಜಿತವಾದ 100 ಆಸನಗಳ ಹಾಲಿನಲ್ಲಿ ಹುಟ್ಟು ಹಬ್ಬ ಆಚರಣೆ, ಸೀಮಂತ, ನಾಮಕರಣ ಇತ್ಯಾದಿ ಸಣ್ಣ ಕಾರ್ಯಕ್ರಮಗಳಿಗೆ ಕೊಠಡಿ ಸಹಿತ ಎಲ್ಲಾ (ಊಟ, ತಿಂಡಿ ಇತರೆ) ವ್ಯವಸ್ಥೆಯೊಂದಿಗೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ವ್ಯವಸ್ಥೆ ಮಾಡಿಕೊಡಲಾಗುವುದು.

**ವಿ.ಸೂ. ಅಚ್ಚುಕಟ್ಟಾದ ಬ್ರಾಹ್ಮಣ ಅಡಿಗೆಯವರಿಂದ ಕ್ಯಾಟರಿಂಗ್ ವ್ಯವಸ್ಥೆಯಿದೆ.**
**(ಯಾವುದೇ ತರವಾದ ಬಾಡಿಗೆ ಇರುವುದಿಲ್ಲ)**
**ಸಂಪರ್ಕಿಸ ಬೇಕಾದ ದೂರವಾಣಿ ಸಂಖ್ಯೆ : 8088799540 / 8861998817**

ನಿಮ್ಮ
for M.S.
ಡಾ. ಬಿ.ಆರ್. ನಟರಾಜ್ ಜೋಯಿಸ್
ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧಾ ಕೇಂದ್ರ

# 'ವನವಿಹಾರಿ' ಬ.ನ. ಸುಂದರ ರಾವ್

**– ಸುರೇಶ್ ಮೂನ**



ಯಾರು ತನ್ನ ಪೂರ್ವಜರ ಹಿರಿಮೆ, ಗರಿಮೆ, ಪರಾಕ್ರಮ, ಅಪ್ರತಿಮ ಸಾಧನೆ ಮುಂತಾದ ಸಂಗತಿಗಳನ್ನು ಪ್ರತಿಯೊಬ್ಬರ ಮನೆಯ ಬಾಗಿಲಿಗೂ ತಲುಪಿಸುತ್ತಾನೋ ಅವನು ಸಮಾಜದ ಒಬ್ಬ ಅಪೂರ್ವ ಹಿತಚಿಂತಕ ಎಂದು ಸರ್ವಕಾಲಕ್ಕೂ ಜನರಿಗೆ ಅದರಲ್ಲೂ ಯುವಜನತೆಗೆ ಮಾದರಿಯಾಗಿರುವ ಮಹಾತ್ಮ ಸ್ವಾಮಿ ವಿವೇಕಾನಂದರು ಅಭಿಪ್ರಾಯಪಟ್ಟಿದ್ದಾರೆ.

ಅಂತಹ ಒಂದು ಪವಿತ್ರವಾದ ಕಾಯಕವನ್ನು ಕೈಗೊಂಡವರು ಬ.ನ. ಸುಂದರ ರಾವ್.

ಸ್ಮಾರ್ಥರಲ್ಲಿನ ಬಡಗನಾಡು ಸಮುದಾಯಕ್ಕೆ ಸೇರಿದ ಇವರು ನರಸಿಂಹಮೂರ್ತಿ ರಾವ್ ಮತ್ತು ವಸಂತ ಲಕ್ಷ್ಮಮ್ಮ ಇವರ ಮಗನಾಗಿ 1918 ರ ಮಾರ್ಚ್ ತಿಂಗಳ 26ರಂದು ಬೆಳಗೆರೆ ಎಂಬ ಗ್ರಾಮದಲ್ಲಿ ಜನಿಸಿದರು. ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸ ವರ್ತೂರು ಮತ್ತು ಮಾಗಡಿಯಲ್ಲಿ ಮುಗಿಸಿ ಪ್ರೌಢಶಾಲೆ ಮತ್ತು ಕಾಲೇಜು ಶಿಕ್ಷಣವನ್ನು ಬೆಂಗಳೂರಿನಲ್ಲಿ ಪಡೆದರು. ನ್ಯಾಷನಲ್ ಹೈ ಸ್ಕೂಲ್ ನಲ್ಲಿ ಇರುವಾಗಲೇ ಬರವಣಿಗೆಯ ಹವ್ಯಾಸವನ್ನು ರೂಢಿಸಿಕೊಂಡಿದ್ದ ಇವರು ಶಾಲಾ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದರು. ಶಾಲೆಯ ಸ್ವಯಂಸೇವಕರಾಗಿ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. 1940ರಲ್ಲಿ ನಡೆದ ಅಖಿಲ ಭಾರತ ಸ್ಕೌಟ್ ರಾಲಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಲ್ಲದೆ, ಆಗಿನ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ವರದಿಗಾರರಾಗಿದ್ದ ಎ. ನಂಜುಂಡ ರಾಯರೊಂದಿಗೆ' ರಾಲಿ ಸಮಾಚಾರ'ಎಂಬ ಪತ್ರಿಕೆಯಲ್ಲಿ ಸಂಪಾದಕರಾಗಿದ್ದರು. ಎರಡನೇ ವಿಶ್ವಸಮರ ಪ್ರಾರಂಭವಾದಾಗ ಬೆಂಗಳೂರಿನಂತಹ ಪ್ರಮುಖ ನಗರಗಳಲ್ಲಿ ವಿಮಾನ ಧಾಳಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕೆಂದು ಕೇಂದ್ರ ಸರ್ಕಾರ ಆದೇಶ ನೀಡಿತ್ತು. ಇದಕ್ಕೆ ಸರ್ಕಾರದ ಪರವಾಗಿ ಪಿ.ಎಚ್. ಕೃಷ್ಣರಾಯರು ಕಂಟ್ರೋಲರ್ ಆಗಿಯೂ, ಎನ್. ಮಾಧವರಾಯರು ವಿಶೇಷ ಅಧಿಕಾರಿಯಾಗಿಯೂ ನೇಮಕಗೊಂಡರು. ಇದಕ್ಕಾಗಿ ಬೆಂಗಳೂರಿನ ಕೆಲವು ತರುಣರನ್ನು ಆಯ್ಕೆ ಮಾಡಿ ಹೆಚ್ಚಿನ ತರಬೇತಿ ಪಡೆದು ಬರಲು ಮುಂಬೈಗೆ ಕಳುಹಿಸಲಾಯಿತು. ಹಾಗೆ ಆಯ್ಕೆಯಾದವರಲ್ಲಿ ಬ.ನ. ಸುಂದರರಾಯರು ಇದ್ದರು. ಅಲ್ಲಿಂದ ಹಿಂತಿರುಗಿ ಅಪಾರ ಆಸಕ್ತಿ ಮತ್ತು ಶ್ರದ್ಧೆಯಿಂದ ಬೆಂಗಳೂರು ನಗರ ಹಾಗೂ ಇತರ ಪ್ರದೇಶಗಳಲ್ಲಿ ವಿಮಾನ ಧಾಳಿಯ ಬಗ್ಗೆ ವಿವರಗಳು, ವಹಿಸಬೇಕಾದ ಮುನ್ನೆಚ್ಚರಿಕೆಗಳು ಮುಂತಾದ ವಿವರಗಳನ್ನು ತಿಳಿಸುವ ತರಗತಿಗಳನ್ನು ನಡೆಸಿದರು.ಆಗಿನ ಕಾಲಕ್ಕೆ ಬೆಂಗಳೂರಿನಲ್ಲಿ ಇದೊಂದು ಪ್ರಮುಖ ಗಮನ ಸೆಳೆದ ಕಾರ್ಯವಾಗಿತ್ತು. ಎರಡನೇ ಮಹಾಯುದ್ಧ ಪ್ರಾರಂಭವಾಗಿ ಭಾರತಕ್ಕೂ ಅದರ ಬಿಸಿ ತಟ್ಟಿದಾಗ ಕೇಂದ್ರ ಸರ್ಕಾರವು ರಾಷ್ಟ್ರೀಯ ರಕ್ಷಣಾ ದಳ (ನ್ಯಾಷನಲ್ ವಾರ್ ಫ್ರಂಟ್) ಎಂಬ ಸಂಘಟನೆಯನ್ನು ಸ್ಥಾಪಿಸಿದಾಗ ಬ.ನ. ಸುಂದರರಾಯರನ್ನು ಬೆಂಗಳೂರು ಜಿಲ್ಲಾ ವ್ಯವಸ್ಥಾಪಕರಾಗಿ ನೇಮಿಸಲಾಯಿತು. ಆಗ, ಈ ನಗರ ಮತ್ತು ಇತರ ಪ್ರದೇಶಗಳಲ್ಲಿ ಸಂಚರಿಸಿ ಜನರಲ್ಲಿ ಹುದುಗಿದ್ದ ಯುದ್ಧದ ಭಯವನ್ನು ನಿವಾರಿಸುತ್ತಿದ್ದರು. ಅಲ್ಲದೆ ಸೈನ್ಯಕ್ಕೆ ಯೋಧರನ್ನು ನೇಮಿಸಿಕೊಳ್ಳುವ ಕಾರ್ಯದಲ್ಲೂ ತೊಡಗಿಸಿಕೊಂಡಿದ್ದರು. ವರಿಷ್ಠ ಸೈನ್ಯದ ಅಧಿಕಾರಿಗಳೊಡನೆ ಚರ್ಚಿಸಿ ಬಂದ ಜನರಿಗೆ ಭಾರತೀಯ ಸೈನ್ಯದ ಹಿರಿಮೆಯನ್ನು ತಿಳಿಸುತ್ತಿದ್ದರು. ಇವರ ಈ ಮಹತ್ತರ ಸೇವಾ ಕಾರ್ಯವನ್ನು ಆಗಿನ ದಿವಾನ್ ಮಾಧವರಾವ್ ಶ್ಲಾಘಿಸಿದ್ದರು. 1948 ರಲ್ಲಿ ಹೈದರಾಬಾದಿನ ನಿಜಾಮರ ವಿರುದ್ಧ ಕಳಿಸುವ ಸೈನ್ಯಕ್ಕೆ ನೆರವಾಗಲು ಗೃಹ ರಕ್ಷಕ ದಳವನ್ನು ರಚಿಸಲಾಯಿತು. ಬೆಂಗಳೂರಿನಲ್ಲೂ ಈ ವಿಭಾಗವು ಪ್ರಾರಂಭವಾಗಿ ಈ ಕಾರ್ಯದಲ್ಲಿ ಅನುಭವ ಪಡೆದಿದ್ದ ಬ.ನ. ಸುಂದರ ರಾಯರನ್ನು ದಕ್ಷಿಣ ವಲಯದ ಮುಖ್ಯಸ್ಥರನ್ನಾಗಿ ನೇಮಿಸಲಾಯಿತು. ಈ ದಳದಲ್ಲಿ ಇದ್ದಾಗಲೇ ಬೆಂಗಳೂರಿನಲ್ಲಿ ಕೋಮು ಗಲಭೆ ಆರಂಭ ಆಗಬಹುದಾಗಿದ್ದ ಒಂದು ಅಂಶವನ್ನು ಪತ್ತೆ ಹಚ್ಚಿ ಸಕಾಲದಲ್ಲಿ ಗೃಹ ಮಂತ್ರಿಗಳಿಗೆ ತಿಳಿಸಿ, ಈ ಗಲಭೆ ತಡೆಯಲು ಕಾರಣರಾದರು. ನಗರದ ಹಿತವನ್ನು ಕಾಪಾಡಿದ ಈ ಕಾರ್ಯಕ್ಕೆ ಸರಕಾರ ರಜತಪದಕವನ್ನು ಕೊಟ್ಟು ಇವರನ್ನು ಗೌರವಿಸಿತು.

ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಅಕೌಂಟೆಂಟ್ ಆಗಿ ನೇಮಕಗೊಂಡ ಇವರು ವರ್ಗವಾಗಿ ಬೇರೆ ಬೇರೆ ಊರುಗಳಿಗೆ ಹೋದಾಗಲೆಲ್ಲ ಅಲ್ಲಿಯೂ ಸಂಘಟನೆಗಳನ್ನು ಮಾಡಿ ಜನಜಾಗೃತಿಯನ್ನು

ಮೂಡಿಸಿದರು. 1956 ರಲ್ಲಿ ಬೆಂಗಳೂರಿಗೆ ವರ್ಗವಾಗಿ ಬಂದ ಮೇಲೆ ಕನ್ನಡ ಸಾಹಿತ್ಯ ಪರಿಷತ್ತಿಗೆ ಇವರ ಸೇವೆ ಲಭಿಸಿತು. ಬಿ.ಶಿವಮೂರ್ತಿ ಶಾಸ್ತ್ರಿಗಳ ಪುಸ್ತಕ ಭಂಡಾರ ಉತ್ಸವ ಉಪನ್ಯಾಸ ಮಂಡಳಿ ಸದಸ್ಯರಾಗಿ ಡಾ. ಟಿ. ಎಂ. ಎ. ಪೈ ಅವರ ಧನ ಸಹಾಯದಿಂದ ನಡೆದ ಭಾಷಣ ಕಲಾ ತರಗತಿಗಳ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸಿದರು. 1968 ರಲ್ಲಿ ಮತ್ತೆ ವರ್ಗಾವಣೆಗೊಂಡು ಬೆಂಗಳೂರಿಗೆ ಬಂದು ಜಿ. ನಾರಾಯಣರವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಕನ್ನಡ ಪುಸ್ತಕ ಪ್ರಚಾರ ಚಳುವಳಿ, ಪುಸ್ತಕ ಪ್ರದರ್ಶನ, ಸಾಹಿತ್ಯ ಪ್ರಸಾರ ಯೋಜನೆ ಮುಂತಾದ ಕಾರ್ಯಕ್ರಮಗಳಲ್ಲಿ ಮತ್ತು ಸಾಹಿತ್ಯ ಸಮ್ಮೇಳನಗಳಲ್ಲಿ ಶ್ರದ್ದೆ ಮತ್ತು ಉತ್ಸಾಹಗಳಿಂದ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡರು. ತಾವೇ ಬರಹಗಾರರಾಗಿದ್ದರಿಂದ ಸಮಾಜದ ಆಗುಹೋಗುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ವಿವಿಧ ವಿಷಯಗಳನ್ನು ಆಧರಿಸಿ ಚಿಂತನೆಗೆ ಒಳಪಡಿಸುವ ಹಲವಾರು ಕೃತಿಗಳನ್ನು ರಚಿಸಿದರು. ಕೆಲವು ಗ್ರಂಥಗಳನ್ನು ಇತರ ಪ್ರಕಾಶಕರನ್ನು ಅವಲಂಬಿಸಿದೆ ತಮ್ಮದೇ ಆದ ವಸಂತ ಸಾಹಿತ್ಯ ಗ್ರಂಥ ಮಾಲೆಯ ಮೂಲಕ ಪ್ರಕಟಿಸಿದ್ದಾರೆ.

'ವನ ವಿಹಾರಿ'ಎಂಬ ಕಾವ್ಯನಾಮದಿಂದ ಇವರು ಬರೆದ ಕೃತಿಗಳಲ್ಲಿ ಭಾಗ್ಯೋದಯ, ಸರ್ ಎಂ ವಿಶ್ವೇಶ್ವರಯ್ಯ ಅವರ ಜೀವನ ಮತ್ತು ಸಾಧನೆ, ಯುದ್ಧದ ಹಡಗು, ಶಿಸ್ತಿನ ಸೈನಿಕ, ಬೆಳ್ಳಾವೆ ನರಹರಿ ಶಾಸ್ತ್ರಿಗಳ ಜೀವನ ಮತ್ತು ಚರಿತ್ರೆ, ತಿರುಪತಿಯಿಂದ ಕನ್ಯಾಕುಮಾರಿಯವರೆಗೆ, ಥಾಟ್ಸ್ ಆನ್ ಎಜುಕೇಶನ್ ಆಫ್ ಇಂಡಿಯಾ ಇವೆಲ್ಲಾ ಬಹಳ ಉಪಯುಕ್ತ ಮತ್ತು ಜನಪ್ರಿಯ ಕೃತಿಗಳಾಗಿವೆ. ಇವರ ವಿವಿಧ ಕ್ಷೇತ್ರಗಳ ಸಾಧನೆಯನ್ನು ಗುರುತಿಸಿ ಫೇಮಸ್ ಇಂಡಿಯಾ ಪಬ್ಲಿಕೇಷನ್ಸ್ ಅವರು ಪ್ರಕಟಿಸಿದ ಹೂ ಈಸ್ ಹೂ ನಲ್ಲಿಯ ರೆಫರೆನ್ಸ್ ಇಂಡಿಯಾ ದಲ್ಲಿ ಇವರ ಪರಿಚಯ ಪ್ರಕಟವಾಗಿದೆ. 1985 ರಲ್ಲಿ ಇವರ ಊರಿನ ಯುವಕರು ಮತ್ತು ನಾಗರೀಕರು ಸನ್ಮಾನಿಸಿ ಅದರ ನೆನಪಿಗಾಗಿ 'ವನ ವಿಹಾರಿ' ಎಂಬ ಅಭಿನಂದನಾ ಸಂಪುಟವನ್ನು ಹೊರ ತಂದಿದ್ದಾರೆ. ಪ್ರೊ. ಟಿ. ಕೇಶವ ಭಟ್ ಅವರ ಸಂಪಾದಕತ್ವದ ಈ ಕೃತಿಯಲ್ಲಿ ನಾಡಿನ ಪ್ರಸಿದ್ಧ ಸಾಹಿತಿಗಳು ಮತ್ತು ವಿದ್ವಾಂಸರುಗಳು ಬ.ನ. ಸುಂದರರಾಯರ ವ್ಯಕ್ತಿತ್ವ ಮತ್ತು ಸಾಧನೆಗಳ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಈ ಎಲ್ಲ ಸಾಧನೆಗಳು ಒಂದು ತೂಕವಾದರೆ ಇದಕ್ಕೆ ಮುಕುಟ ಪ್ರಾಯವಾಗಿ ಇರುವ ಇವರ ಮಹತ್ಕಾರ್ಯ ಎಂದರೆ 'ಬೆಂಗಳೂರಿನ ಇತಿಹಾಸ' ಎಂಬ ಅಮೂಲ್ಯ ಪುಸ್ತಕವನ್ನು ಬರೆದಿರುವುದು. ಬೆಂಗಳೂರು ನಗರದ ಇತಿಹಾಸದ ದಾಖಲೀಕರಣಕ್ಕೆ ನೀಡಿರುವ ಅತ್ಯಂತ ಮಹತ್ವದ ಕೊಡುಗೆ ಇದು. ತಮ್ಮ ವೃತ್ತಿಯಿಂದ ನಿವೃತ್ತರಾದ ಮೇಲೆ ದಣಿವು ಆಯಾಸಗಳನ್ನು ಲೆಕ್ಕಿಸದೆ ಸತತವಾಗಿ ಓಡಾಡಿ ಅತೀವ ಪರಿಶ್ರಮ ದೊಂದಿಗೆ ರಚಿಸಿದ ಕೃತಿ ಇದು. ಕರ್ನಾಟಕ ಸರಕಾರದ ಸೆಕ್ರೆಟರಿಎಟ್ ಕ್ಲಬ್‌ನಲ್ಲಿ ಮೂರು ತಿಂಗಳುಗಳ ಕಾಲ ಬೆಂಗಳೂರಿನ ಇತಿಹಾಸದ ಬಗ್ಗೆ 40 ಉಪನ್ಯಾಸಗಳನ್ನು ನೀಡಿದ ಮೇಲೆ, ಹಿತೈಷಿಗಳ ಸಲಹೆ ಮೇರೆಗೆ ಇವರು ಈ ಗ್ರಂಥದ ರಚನೆಗೆ ತೊಡಗಿದರು. ಎಂ. ಫಸ್ಲಲ್ ಹಸನ್ ಅವರು ಇಂಗ್ಲಿಷ್‌ನಲ್ಲಿ ಬರೆದ 'ಬ್ಯಾಂಗಲೋರ್ ಥ್ರೂ ದ ಸೆಂಚುರಿಸ್' ಎಂಬ ಕೃತಿಯನ್ನು ಬಿಟ್ಟರೆ ಕನ್ನಡದಲ್ಲಿ ಅಲ್ಲಿಯವರೆಗೆ ಬೆಂಗಳೂರು ಇತಿಹಾಸದ ಬಗ್ಗೆ ಕಾಲಾನುಕ್ರಮವಾಗಿ ಜನಸಾಮಾನ್ಯರಿಗೂ ಅನುಕೂಲವಾಗುವಂಥಹ ರೀತಿಯಲ್ಲಿ ಕನ್ನಡದಲ್ಲಿ ಪುಸ್ತಕ ಬಂದಿರಲಿಲ್ಲ. ಹೀಗಾಗಿ ಇವರು ಬಿ. ಎಲ್. ರಾಮಚಂದ್ರಶಾಸ್ತ್ರಿ ಎಂಬ ಆಸಕ್ತ ಮಿತ್ರರನ್ನು ಆರ್. ಎಸ್ ರಾಜನ್ ಮತ್ತು ಬದರಿನಾಥ್ ಎಂಬ ಫೋಟೋಗ್ರಾಫರ್ ಗಳನ್ನು ಸೇರಿಸಿಕೊಂಡು ಅಪರೂಪದ ಮಾಹಿತಿ ಮತ್ತು ಫೋಟೋಗಳನ್ನು ಸಂಗ್ರಹಿಸಿದರು. ರಾಜ್ಯ ಪತ್ರಾಗಾರದ ದಾಖಲೆಗಳನ್ನು ಜಾಲಾಡಿದರು.ಇದು ನಗರದ ಇತಿಹಾಸದ ರಚನೆಗೆ ನಡೆದ ಅಪರೂಪದ ಪ್ರಯತ್ನವಾಗಿದ್ದರಿಂದ ಈ ನಾಡಿನ ದಿವಾನರಾಗಿದ್ದ ಎನ್. ಮಾಧವರಾಯರ ಪುತ್ರರೂ ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳು ಆಗಿದ್ದ ಎನ್ ನರಸಿಂಹರಾವ್ ಮತ್ತು ಎನ್ ಲಕ್ಷ್ಮಣರಾವ್, ವಿ. ಎಸ್.ಕೃಷ್ಣ ಅಯ್ಯರ್, ಜಿ. ನಾರಾಯಣ, ನಿಟ್ಟೂರು ಶ್ರೀನಿವಾಸರಾಯರಂತಹ ಗಣ್ಯ ವ್ಯಕ್ತಿಗಳು, ಸಂಬಂಧ ಪಟ್ಟ ಅಧಿಕಾರಿಗಳು ಮತ್ತು ತಜ್ಞರು ಇವರಿಗೆ ಪ್ರೋತ್ಸಾಹ ನೀಡಿದ್ದಾರೆ. ಸ್ವತಃ ಲೇಖಕಿಯೂ ಆದ ಇವರ ಪತ್ನಿ ಶ್ರೀಮತಿ ರತ್ನಮ್ಮ ಹಾಗೂ ಮಕ್ಕಳಾದ ನೇತ್ರಾವತಿ, ಬಿ ಎಸ್, ಶೈಲಜಾ, ರಾಮ ಪ್ರಕಾಶ್ ಹಾಗೂ ಜಗದೀಶ್ ಚಂದ್ರ ಹೀಗೆ ಇಡೀ ಕುಟುಂಬವೇ ಈ ಕೃತಿಯನ್ನು ತರಲು ಶ್ರಮಿಸಿದೆ. ಇವರು ತಮ್ಮದೇ ಆದ ವಸಂತ ಸಾಹಿತ್ಯ ಗ್ರಂಥಮಾಲ ದಿಂದ ಈ ಕೃತಿಯನ್ನು ಹೊರ ತಂದಿರುವುದು ಗಮನಾರ್ಹ ಸಂಗತಿ. 1986ರ ಜನವರಿ 17ರಂದು ಯವನಿಕ ಸಭಾಂಗಣದಲ್ಲಿ ಹಲವಾರು ಗಣ್ಯ ವ್ಯಕ್ತಿಗಳು ಮತ್ತು ತಜ್ಞರ ಸಮ್ಮುಖದಲ್ಲಿ ಈ ಅಪರೂಪದ ಕೃತಿ ಬಿಡುಗಡೆಯಾಯಿತು.

ಕರ್ನಾಟಕ ಗೆಜೆಟಿಯರ್‌ಗಳ ಪ್ರಧಾನ ಸಂಪಾದಕರಾಗಿದ್ದ ಮತ್ತು ಪ್ರಸಿದ್ಧ ಇತಿಹಾಸ ತಜ್ಞರಾಗಿದ್ದ ಡಾ. ಸೂರ್ಯನಾಥ್. ಯು. ಕಾಮತ್ ಅವರು ಈ ಕೃತಿಗೆ ಬರೆದ ಮುನ್ನುಡಿಯಲ್ಲಿ ಹೀಗೆ ಅಭಿಪ್ರಾಯ ಪಡುತ್ತಾರೆ. '...ಬೆಂಗಳೂರಿನ ಇತಿಹಾಸದ ಜೊತೆಗೆ ಈ ಕೃತಿಯಲ್ಲಿ ಮೈಸೂರಿನ ಇತಿಹಾಸವು ಬಂದಿದೆ. ಮೈಸೂರು ಅರಸರು, ಕಮಿಷನರ್‌ಗಳು, ಹಾಗೂ ದಿವಾನರುಗಳ ಜೀವನ ಚರಿತ್ರೆಯು ವಿವರವಾಗಿ ಬಂದುಬಿಟ್ಟಿದೆ. ಇದು ಬೆಂಗಳೂರಿನ ಇತಿಹಾಸಕ್ಕೆ ಸಂಬಂಧವಿಲ್ಲದ ವಿಷಯ ಎನಿಸಬಹುದಾದರೂ ಕನ್ನಡದಲ್ಲಿ ಸಂಗ್ರಹವಾಗಿ ಈ ವಿವರಗಳು ಒಂದೆಡೆ ಬಂದಿರುವುದು ಇದೇ ಮೊದಲು. ಮೈಸೂರು ಇತಿಹಾಸದ ಬಗೆಗೂ ಯಾವುದೇ ಒಂದು ಪುಸ್ತಕ ಕನ್ನಡದಲ್ಲಿ ಬಂದಿಲ್ಲ. ಈ ಪುಸ್ತಕವು ಸರಾಗವಾಗಿ ಕಥೆಯನ್ನು ಓದುವಂತೆ ಓದಿಸಿಕೊಂಡು ಹೋಗುತ್ತದೆ. ಬೆಂಗಳೂರಿನ ಸಾಮಾಜಿಕ, ಆರ್ಥಿಕ, ಹಾಗೂ ರಾಜಕೀಯ ಚಟುವಟಿಕೆಗಳ ಬಗ್ಗೆ ಅನೇಕ ಸಂಗತಿಗಳನ್ನು ಇಲ್ಲಿ ಸಂಗ್ರಹಿಸಿ ಕೊಟ್ಟು ಓದುಗರ ಕುತೂಹಲ ಕೆರಳಿಸುವಂತಿದೆ. ಅಮೂಲ್ಯವಾದ ಹಾಗೂ ಐತಿಹಾಸಿಕ ಮಹತ್ವದ ನೂರಾರು ಚಿತ್ರಗಳನ್ನು ಸಂಗ್ರಹಿಸಿ ಪುಸ್ತಕದಲ್ಲಿ ಅಳವಡಿಸಿರುವುದು ಮೆಚ್ಚತಕ್ಕದ್ದಾಗಿದೆ. ನೌಕರಿಯಿಂದ ನಿವೃತ್ತರಾದ ನಂತರವೂ ಜ್ಞಾನ ದಾಹದ ಪ್ರವೃತ್ತಿಯಿಂದ ನಿವೃತ್ತರಾಗದೆ ಸುಂದರರಾಯರು ಬೃಹತ್ತಾದ

ಪುಸ್ತಕವನ್ನು ರಚಿಸಿರುವುದಕ್ಕಾಗಿ ನಾನು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ...'

ಬೆಂಗಳೂರಿನ ಇತಿಹಾಸದ ದಾಖಲೀಕರಣಕ್ಕೆ ಅತ್ಯಂತ ಮಹತ್ವಪೂರ್ಣ ಕೊಡುಗೆಯಾಗಿ ಮೂಡಿಬಂದಿರುವ ಈ ಕೃತಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆಯಲು ಅರ್ಹವಾಗಿದೆ ಎಂದಿದ್ದಾರೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಮತ್ತು ಈ ನಗರದ ಮೇಯರ್ ಆಗಿದ್ದ ಜಿ. ನಾರಾಯಣರವರು.

ಬೆಂಗಳೂರಿನ ಅಪರೂಪದ ಚಿತ್ರಗಳ ದಾಖಲೆಗಳ ಈ ಗ್ರಂಥದ ಪ್ರಕಟಣೆಗಾಗಿ ಸರಕಾರದ ನೆರವನ್ನು ಕೋರಲಾಗಿತ್ತು. ಸರ್ಕಾರವು ಸುಮಾರು 20,000 ಮೌಲ್ಯದ ಪುಸ್ತಕಗಳನ್ನು ಕೊಂಡಿತು. ಈ ಕೃತಿಯ ಮೊದಲ ಮುದ್ರಣದ ಪ್ರತಿಗಳು ಮುಗಿದು ಕೆಲವು ವರ್ಷಗಳ ಹಿಂದಷ್ಟೇ ಅಂಕಿತ ಪುಸ್ತಕದವರು ಇದನ್ನು ಮರುಮುದ್ರಿಸಿ ಹೊರತಂದಿದ್ದಾರೆ.

ಈ ಕೃತಿಯ ಬಿಡುಗಡೆಯ ಸಮಾರಂಭಕ್ಕೆ ನಾನು (ಸುರೇಶ್ ಮೂನ) ಹೋಗಿದ್ದೆ. ಆಗ ಬ.ನ ಸುಂದರ ರಾಯರು ಈ ನಗರದ ಬಗ್ಗೆ ಇನ್ನೂ ಆಳವಾದ ಅಧ್ಯಯನವನ್ನು ಮಾಡುವ ಆಶಯವನ್ನು ವ್ಯಕ್ತಪಡಿಸಿದರು. ತಮ್ಮ ಕೃತಿಯ ಮುನ್ನುಡಿಯಲ್ಲಿ'.... ಬೆಂಗಳೂರಿನ ಬಗ್ಗೆ ಎಲ್ಲಾ ವಿವರಗಳನ್ನು ಈ ಗ್ರಂಥ ಒಳಗೊಂಡಿದೆ ಎಂದು ಹೇಳಲಾರೆ. ಕಂಟೋನ್ಮೆಂಟ್ ಪ್ರದೇಶ, ಬೆಂಗಳೂರು ಅರಮನೆ ವಿಚಾರ, ಚಿಕ್ಕದೇವರಾಜ ಒಡೆಯರು ಬೆಂಗಳೂರಿನ ಪಡೆದ ಸಂಗತಿ, ಶಿವಾಜಿಯ ಬಾಲ್ಯಕಾಲದ ವಿಚಾರ, ಮುಖ್ಯಮಂತ್ರಿಗಳ ಆಡಳಿತ, ಇನ್ನು ಮುಂತಾದ ವಿಷಯಗಳ ಬಗ್ಗೆ ಅಧಿಕೃತವಾದ ದಾಖಲೆಗಳ ಅಧ್ಯಯನ ಮತ್ತು ಚರ್ಚೆ ನಡೆಯಬೇಕಾಗಿದೆ, ಈ ಬಗ್ಗೆ ಇನ್ನು ಆಳವಾದ, ವಿಸ್ತೃತವಾದ ಸಂಶೋಧನೆಗೆ ವಿಫಲವಾದ ಅವಕಾಶವಿದೆ....' ಎಂಬ ಅಭಿಪ್ರಾಯವನ್ನು ಸುಂದರರಾಯರು ವ್ಯಕ್ತಪಡಿಸಿದ್ದಾರೆ. ಇನ್ನಷ್ಟು ಕಾಲ ಅವರು ಬದುಕಿದ್ದಿದ್ದರೆ ಬಹುಶಃ ಇಂತಹ ಮತ್ತಷ್ಟು ಅಪರೂಪದ ಸಂಗತಿಗಳನ್ನು ಒಳಗೊಂಡ ಇನ್ನೊಂದು ಸಂಪುಟವು ಹೊರಬರುತ್ತಿತ್ತು ಎಂದೆನಿಸುತ್ತದೆ.

ಇನ್ನು, ಬೆಂಗಳೂರಿನ ಇತಿಹಾಸದ ಬಗ್ಗೆ ನನ್ನ ಕಳೆದ ಸುಮಾರು ಮೂರುವರೆ ದಶಕಗಳ ಅಧ್ಯಯನ, ಅಂಕಣ ಬರವಣಿಗೆ, ಪುಸ್ತಕ ಪ್ರಕಟಣೆ, ದೃಶ್ಯಮಾಧ್ಯಮಗಳಲ್ಲಿ ಕಾರ್ಯಕ್ರಮ ನೀಡುವಿಕೆ, ಉಪನ್ಯಾಸಗಳು ಮುಂತಾದ ವಿವಿಧ ಚಟುವಟಿಕೆಗಳಿಗೆ ಬುನಾದಿ ಒದಗಿಸಿದ ಕೃತಿ 'ಬೆಂಗಳೂರಿನ ಇತಿಹಾಸ'

ಕನ್ನಡದ ಓದುಗರಿಗೆ, ಅದರಲ್ಲೂ ಇಂದಿನ ಯುವ ಜನಾಂಗಕ್ಕೆ ಅತ್ಯಂತ ಅವಶ್ಯಕವಾದ ಬೆಂಗಳೂರಿನ ಇತಿಹಾಸದಂತಹ ಉಪಯುಕ್ತ ಗ್ರಂಥವನ್ನು ನೀಡಿದ ಬ.ನ ಸುಂದರರಾಯರು 1986ರ ಅಕ್ಟೋಬರ್ 9 ರಂದು ದೈವಾಧೀನರಾದರು.

ಜಾಹಿರಾತು

**ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ**

**Sri Srinivasa Nilaya Dharmika Sabha Mandira**

**ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ**

**ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085**

**ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.**

**ಸ್ಥಳದ ಬಾಡಿಗೆ ಇರುವುದಿಲ್ಲ.**

**ದಕ್ಷಿಣ ಮತ್ತು ಉತ್ತರ ಭಾರತದ ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು**

**ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ**

**ದೂರವಾಣಿ : 2672 2267, 98866 55755**

# ಗಣೇಶ ದಾಮೋದರ ಸಾವರ್ಕರ್

– **ಕೆ.ಎನ್. ಛಾಯಾಪತಿ,** ಮಹಾಸಭಾ. ಉಪಾಧ್ಯಕ್ಷರು



**"ಬತ್ತಿತೆರೆದೀ ದೇಹ ಉರಿಯಲಿ**
**ಸಾರ್ಥಕತೆ ಈ ಬಾಳಿಗೆ"**

ಒಂದು ಕುಟುಂಬದಲ್ಲಿ ಅಣ್ಣ ತಮ್ಮ ಅವರ ಹೆಂಡತಿಯರು ಹೀಗೆ ಇಡೀ ಕುಟುಂಬವೇ ತಮ್ಮ ಸ್ವಂತ ಸುಖಜೀವನಕ್ಕೆ ಬೆಂಕಿ ಹಚ್ಚಿಕೊಂಡು, ಅಂಬಲಿ ಗಂಜಿ ಕುಡಿದುಕೊಂಡು, ತಮ್ಮಲ್ಲಿದ್ದ ಒಡವೆ ವಸ್ತುಗಳನ್ನು ಮಾರಿ, ಆ ಹಣವನ್ನು ಕ್ರಾಂತಿಕಾರಿ ಚಟುವಟಿಕೆಗೆ ಉಪಯೋಗಿಸಿ, ದೇಶಕ್ಕೋಸ್ಕರ ತಮ್ಮನ್ನೇ ತಾವು ನಾಶ ಮಾಡಿಕೊಂಡು, ವಂಶೋದ್ಧಾರ ಎಂಬ ಹಂಬಲವನ್ನು ಬದಿಗಿಟ್ಟು ದೇಶೋದ್ಧಾರ ಎಂಬ ಶ್ರೇಷ್ಠ ಚಿಂತನೆ, ಆಚರಣೆ ಮಾಡಿದ ಕುಟುಂಬವೆಂದರೆ ಅದು ಸ್ವಾತಂತ್ರ್ಯ ವೀರ ವಿನಾಯಕ ದಾಮೋದರ ಸಾವರ್ಕರ್ ರವರ ಕುಟುಂಬ.

ವಿನಾಯಕ ದಾಮೋದರ ಸಾವರ್ಕರ್, ಗಣೇಶ ದಾಮೋದರ ಸಾವರ್ಕರ್, ನಾರಾಯಣ ದಾಮೋದರ ಸಾವರ್ಕರ್ ಎಂಬ ಮೂರು ಜನ ಸಹೋದರರು ಸ್ವಾತಂತ್ರ್ಯ ಹೋರಾಟದಲ್ಲಿ ಜೈಲು ಶಿಕ್ಷೆ, ದೈಹಿಕ ಹಿಂಸೆ, ಮಾನಸಿಕ ಆಘಾತಗಳನ್ನು ಅನುಭವಿಸಿ ಅಮರರಾದ ಸಹೋದರತ್ರಯರು ಅವಿಸ್ಮರಣೀಯರು.

ಗಣೇಶ ದಾಮೋದರ ಸಾವರ್ಕರ್ ಇವರು ವೀರ ಸಾವರ್ಕರ್ ರವರ ಅಣ್ಣ.ಇವರನ್ನು ಬಾಬುರಾವ್ ಸಾವರ್ಕರ್ ಎಂದೂ ಕರೆಯುತ್ತಾರೆ. ತಂದೆ ದಾಮೋದರ ಪಂತ್ ಮತ್ತು ತಾಯಿ ರಾಧಾಬಾಯಿ.ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಬಾಗೂರು ಎಂಬ ಹಳ್ಳಿಯಲ್ಲಿ 13 ಜೂನ್ 1879 ರಲ್ಲಿ ಚಿತ್ಪಾವನ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ತಂದೆ ತಾಯಿಗಳ ಮರಣ ನಂತರ ಇವರ ಇಪ್ಪತ್ತನೆಯ ವಯಸ್ಸಿನಲ್ಲಿ ಮನೆಯ ಜವಾಬ್ದಾರಿಯೆಲ್ಲ ಹೆಗಲೇರಿತು.1893ರಲ್ಲಿ ಮಹಾ ರಾಷ್ಟದ ತ್ರಯಂಬಕೇಶ್ವರ ಊರಿನವರಾದ ಸರಸ್ವತಿ ಬಾಯಿ ಎಂಬ ಕನ್ಯೆಯನ್ನು ಮದುವೆಯಾದರು. (ಇವರನ್ನು ಯೇಸುಬಾಯಿ ಎಂದು ಸಹ ಕರೆಯುತ್ತಾರೆ)

ಈಕೆಯೂ ಸಹ ಜೀವನಪೂರ್ತಿ ಪತಿಯ ಹೋರಾಟದಲ್ಲಿ ಸಹಕರಿಸಿದವರು. ಪತಿಯ ಹೋರಾಟದ ಖರ್ಚು ವೆಚ್ಚಗಳಿಗೆ ತನ್ನ ಒಡವೆಗಳನ್ನೆಲ್ಲ ಮಾರಿ ಪತಿಯ ಬಲಗೈ ಬಂಟೆಯಂತೆ ಜೀವನದುದ್ದಕ್ಕೂ ಜೊತೆಯಲ್ಲೇ ನಿಂತ ಮಹಿಳೆ ಮಾತ್ರವಲ್ಲ, ಸ್ತ್ರೀಯರನ್ನು ಹೋರಾಟಕ್ಕೆ ಸಜ್ಜುಗೊಳಿಸುವ ಕಾರ್ಯವನ್ನು ಮಾಡುತ್ತಿದ್ದರು.1906 ರಲ್ಲಿ ಸಹೋದರ ವೀರ ಸಾವರ್ಕರ್ ಲಂಡನ್ನಿಗೆ ತೆರಳಿದ ನಂತರ ದಾಮೋದರ ಸಾವರ್ಕರ್ ಯುವ ಸದಸ್ಯರನ್ನು ಸೇರಿಸಿ "ಅಭಿನವ ಭಾರತ"ಎಂಬ ಸಂಘಟನೆಯನ್ನು ಕಟ್ಟಿ ಅದರ ಕಾರ್ಯ ಚಟುವಟಿಕೆಯನ್ನು ಯಶಸ್ವಿಯಾಗಿ ಮುನ್ನಡೆಸಿದರು. ಅವರಿಗೆ ದೈಹಿಕ ಮತ್ತು ಬೌದ್ಧಿಕ ತರಬೇತಿ ನೀಡಿದರು. ಬ್ರಿಟಿಷರ ವಿರುದ್ಧದ ವಾತಾವರಣ ಸೃಷ್ಟಿಸಿದರು. "ವಂದೇ ಮಾತರಂ" "ಸ್ವಾತಂತ್ರ್ಯ ಲಕ್ಷ್ಮೀಕೀ ಜೈ" ಎಂದು ಕೂಗಿದ ಕಾರಣ ಅವರ ವಿರುದ್ಧ ಪ್ರಕರಣ ದಾಖಲಿಸಲಾಯಿತು. ಅವರಿಗೆ ಶಿಕ್ಷೆಯಾಯಿತು. ಶಿಕ್ಷೆ ಮುಗಿದನಂತರವೂ ಅವರು ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಲಂಡನ್ನಿನಿಂದ ಅವರ ಸಹೋದರ ವೀರ ಸಾವರ್ಕರ್ ಕಳುಹಿಸಿದ "ಮಜನಿ"(ಇಟಲಿಯ ಸ್ವಾತಂತ್ರ್ಯ ಹೋರಾಟಗಾರ)ಯ ಜೀವನ ಚರಿತ್ರೆಯನ್ನು ಪ್ರಕಟಿಸಿದರು. ದೇಶಭಕ್ತಿ ಗೀತೆಗಳನ್ನು ಬರೆದರು. "ರಣವಿನ ಸ್ವಾತಂತ್ರ್ಯ ಮಿಲನ"(ಯುದ್ಧವಿಲ್ಲದೆ ಸ್ವಾತಂತ್ರ್ಯ ಸಿಗದು) ಎಂದು ಬರೆದ ಕವಿ ಗೋವಿಂದರ ಗೀತೆಯನ್ನು ಪ್ರಕಟಿಸಿದರು. ಲಂಡನ್ನಿನಿಂದ ತಮ್ಮ ಸಾವರ್ಕರ್ ಕಳುಹಿಸಿದ ಸಾಮಗ್ರಿಗಳನ್ನು ಯುವಕರಿಗೆ ಹಂಚುತ್ತಿದ್ದರು. ಲೋಕಮಾನ್ಯ ತಿಲಕರಿಗೆ ಹಾಗೂ ಮತ್ತೊಬ್ಬ ಹೋರಾಟಗಾರ ಪರಂಜಪೆ ಅವರಿಗೆ ಬ್ರಿಟಿಷರು ನೀಡಿದ ಶಿಕ್ಷೆಯನ್ನು ಗಣೇಶ ಪ್ರತಿಭಟಿಸಿದರು. ಇವೆಲ್ಲಾ ಚಟುವಟಿಕೆ ಗಮನಿಸಿದ ಬ್ರಿಟಿಷರು ಅವರ ವಿರುದ್ಧ ಮೊಕದ್ದಮೆ ಹೂಡಿದರು.

ವಿಚಾರಣೆ ನಡೆದು ತಪ್ಪಿತಸ್ಥರೆಂದು ತೀರ್ಮಾನಿಸಿ ಅವರಿಗೆ 1909 ರಲ್ಲಿ ಜೀವಾವಧಿ ಶಿಕ್ಷೆ ವಿಧಿಸಿ ಅಂಡಮಾನ್ ಸೆಲ್ಯುಲರ್ ಜೈಲಿಗೆ ಕಳುಹಿಸಿದರು. 1922 ರಲ್ಲಿ ಅವರ ಶಿಕ್ಷಾ ಅವಧಿ ಮುಗಿದ ನಂತರ ಅವರು "ಯುವಹಿಂದು ಮಹಾಸಭಾ"ವನ್ನು ಸ್ಥಾಪಿಸಿದರು

ಭಗತ್ ಸಿಂಗ್, ರಾಜಗುರು, ಚಂದ್ರಶೇಖರ್ ಆಜಾದ್, ವಿ ಬಿ ಗೋಕತೆ ಮುಂತಾದ ಕ್ರಾಂತಿಕಾರಿಗಳು ಅವರನ್ನು ಭೇಟಿ ಮಾಡಿದರು. ಭಗತ್ ಸಿಂಗ್ ಮುಂತಾದವರ ಮರಣದಂಡನೆ ಶಿಕ್ಷೆಯನ್ನು ರದ್ದು ಪಡಿಸಲು ಕಾಂಗ್ರೆಸ್ ನಾಯಕರನ್ನು ಮತ್ತು ಇತರರನ್ನು ಭೇಟಿ ಮಾಡಿದರು. ಬಾಂಬ್ ಸ್ಫೋಟ ಒಂದರ ರೂವಾರಿಗಳಿಗೆ ಇವರು ಬರೆದ ಪತ್ರಗಳು ಪತ್ತೆಯಾಗಿ ಮತ್ತೆ ಇವರನ್ನು ಬಂಧಿಸಿ ನಾಲ್ಕು ವರ್ಷ ಕಾಲ ಜೈಲಿನಲ್ಲಿರಿಸಿದರು. ಈ ಸಮಯದಲ್ಲಿ ಅವರು "ರಾಷ್ಟ್ರಮೀಮಾಂಸ" ಎಂಬ ಪುಸ್ತಕವನ್ನು ಬರೆದರು. ಈ ಪುಸ್ತಕದಲ್ಲಿ ಪುರಾವೆಗಳನ್ನು ನೀಡುತ್ತಾ "ಹಿಂದೂಸ್ಥಾನ ಒಂದು ಹಿಂದೂ ರಾಷ್ಟ್ರ" ಎಂಬ ಚಿಂತನೆಯನ್ನು ಮುಂದಿಟ್ಟರು. ಅನುಯಾಯಿಗಳನ್ನು ನಿರ್ಮಿಸುವ ಮೂಲಕ ಅವರು ಯಾವಾಗಲೂ ಸ್ವಾತಂತ್ರ್ಯ ಮತ್ತು ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಶ್ರಮಿಸಿದರು. ಅವರು ಸ್ವಾತಂತ್ರ್ಯ ಮಂತ್ರವನ್ನು ಜಪಿಸುತ್ತ ತಾಯಿ ಭಾರತಿಯ ನಗುಮುಖವನ್ನು ಕಾಣುವ ಕನಸನ್ನು ಕಾಣುತ್ತಲೇ 16 ಮಾರ್ಚ್ 1945 ರಲ್ಲಿ ಇಹಲೋಕವನ್ನು ತ್ಯಜಿಸಿದರು. 66 ವರ್ಷ ಬದುಕಿ ಅವರ ಜೀವನ ಸಾರ್ಥಕ ಮಾಡಿಕೊಂಡರು. ಹುಟ್ಟಿದ ಸಮಾಜ, ದೇಶದ ಋಣವನ್ನು ತೀರಿಸಿದರು. ಇಂದು ಕೋಟಿ ಕೋಟಿ ಭಾರತೀಯರ ಹೃದಯಕ್ಕೆ ನಮ್ಮ ಸ್ವತಂತ್ರ ರಾಷ್ಟ್ರಜೀವನದ ಅಮೃತ ಸ್ಪರ್ಶದ ಮಹತ್ವ ಅನುಭವಕ್ಕೆ ಬರುತ್ತಿಲ್ಲ. ನಮ್ಮ ಜನಸಾಮಾನ್ಯರ ಅಂತಃಕರಣ ತಟ್ಟಿ ಎಬ್ಬಿಸುವ ರಾಷ್ಟ್ರೀಯ ಆದರ್ಶ, ರಾಷ್ಟ್ರ ಪುನರುತ್ಥಾನಕ್ಕಾಗಿ ಅವರಲ್ಲಿ ಪ್ರೇರಣೆ, ಕಾರ್ಯೋತ್ಸಾಹ, ತ್ಯಾಗ,ಪೌರುಷಗಳು ಬೆಳೆದು ನಿಲ್ಲಬೇಕಾದರೆ ಇಂತಹ ಸಾವಿರಾರು ಹೋರಾಟಗಾರರ, ಬಲಿದಾನಗೈದವರ, ದೇಶಕ್ಕೋಸ್ಕರ ತಮ್ಮ ಸರ್ವಸ್ವವನ್ನು ಸುಟ್ಟುಕೊಂಡವರ ಸ್ಮರಣೆ, ಅನುಕರಣೆ ಅತ್ಯಗತ್ಯ.

**ಅವರಿಗೊಂದು ಸೆಲ್ಯೂಟ್.**

**"ಭಾರತ್ ಮಾತಾಕೀ ಜೈ"**


ಜಾಹಿರಾತು

# ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

**# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,**
**ಬ್ಯಾಂಕ್ ಕಾಲೋನಿ, ಬೆಂಗಳೂರು-560 050.**

## ಸ್ಥಳದ ಬಾಡಿಗೆ ಇರುವುದಿಲ್ಲ

**ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,**
**ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,**
**ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು**
**ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.**
**ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.**
**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**
**ದೂರವಾಣಿ : 080-26793054 ಮೊಬೈಲ್ 8277433666**

ವಿಪ್ರವೃಂದ (ರಿ.), ಶ್ರೀನಿವಾಸನಗರ, ಬೆಂಗಳೂರು

## ದಿನಾಂಕ 24.06.2024 – ಬೆಂಗಳೂರುನಲ್ಲಿ ಸಾಮೂಹಿಕ ಉಚಿತ ಉಪನಯನ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಂಗಸಂಸ್ಥೆಯಾದ ವಿಪ್ರವೃಂದ (ರಿ.), ಶ್ರೀನಿವಾಸನಗರ, ಬೆಂಗಳೂರು ಇವರು ದಿನಾಂಕ 24.06.2024ರ ಸೋಮವಾರದಂದು ವರಪ್ರದ ಶ್ರೀ ವೆಂಕಟೇಶ್ವರ ದೇವಸ್ಥಾನ ದೇವಗಿರಿ, ಬನಶಂಕರಿ 2ನೇ ಹಂತ, ಬೆಂಗಳೂರು–70 ಇಲ್ಲಿ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ "ಸಾಮೂಹಿಕ ಉಚಿತ ಉಪನಯನ" ವನ್ನು ಏರ್ಪಡಿಸಿದೆ. ಆಸಕ್ತರು ಹೆಚ್ಚಿನ ವಿವರಗಳಿಗೆ ಈ ಕೆಳಕಂಡವರನ್ನು ಸಂಪರ್ಕಿಸಲು ಕೋರಲಾಗಿದೆ. ನೋಂದಾಯಿಸಲು ಕೊನೆಯ ದಿನಾಂಕ 05–06–2024. ಕೆ.ಎಂ. ವಿನಯ್‌ಕುಮಾರ್ (9591338868), ಕೆ. ರವೀಂದ್ರನಾಥ್ (9448076346) ಮತ್ತು ಬಿ.ವಿ.ರಮೇಶ್ (9880596436)



## ಅಡುಗೆಗೆ ಮಹಿಳೆಯರು ಬೇಕಾಗಿದ್ದಾರೆ

ದಿನನಿತ್ಯ ಬೆಳಿಗ್ಗೆ 7.30 ರಿಂದ 9.30ಕ್ಕೆ ಈ ಕೆಳಕಂಡ ಸ್ಥಳದಲ್ಲಿ ಇಬ್ಬರಿಗೆ ಅಡುಗೆ ಕೆಲಸ ನಿರ್ವಹಿಸಲು ಮಹಿಳೆಯರು ಬೇಕಾಗಿದ್ದಾರೆ.

**ಫ್ಲಾಟ್ ನಂ.2121, 12ನೇ ಮಹಡಿ, ಬಿ2 ಬ್ಲಾಕ್, ಶೋಭಾ ಕೋವೆಲ್ಲಿ,**
**ಉತ್ತರಹಳ್ಳಿ ಮುಖ್ಯರಸ್ತೆ, ಬೆಂಗಳೂರು–560061.**
**(ಮೊ) 9845402375, 9901902375**

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ (ರಿ)**
**ಗಾಯಿತ್ರಿ ಭವನ 3070, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.**
**ಮೊ : 944 26771695**

## ವಿಪ್ರನುಡಿ ಪತ್ರಿಕೆಗೆ ಚಂದಾ ಅರ್ಜಿ

ಹೆಸರು : ______________________

ವಿಳಾಸ ______________________

______________________

ಸದಸ್ಯತ್ವದ ಸಂಖ್ಯೆ : ______________

ದಯಮಾಡಿ ವಿಪ್ರನುಡಿ ಮಾಸ ಪತ್ರಿಕೆ ಕನ್ನಡ/ಇಂಗ್ಲೀಷ್ – ಅವೃತ್ತಿಗೆ ಮೂರುವರ್ಷದ ಚಂದಾ ಹಣ **ರೂ. 500/– (ಕನ್ನಡ) ರೂ 1500 (ಇಂಗ್ಲೀಷ್)** ಗಳನ್ನು ನಗದು/ಚೆಕ್/ಯು.ಪಿ.ಐ. ವರ್ಗಾವಣೆ ಮೂಲಕ ಪಾವತಿಸುತ್ತಿದ್ದೇನೆ.

**ಚಂದಾದಾರರ ಸಹಿ/–**

**AKBMS Membership Account Acc Name :** Akhila Karnataka Brahmana Mahasabha
Bank : Karnataka Bank Ltd A/c No : 1072500102058301I
FSC : KARB0000107BRANCH : BANASHANKARI 2ND STAGE

ವಿ.ಸೂ. : ಹೆಸರು ವಿಳಾಸ, ಹಣ ಪಾವತಿಸಿದ ದಾಖಲೆ/ಸ್ಕ್ರೀನ್‌ಶಾಟ್/ಯು.ಪಿ.ಐ ಸಂಖ್ಯೆಯನ್ನು ಮೊ.ನಂ. 9945850620 ಸಂಖ್ಯೆಗೆ ವಾಟ್ಸ್ಯಾಪ್ ಕಳುಹಿಸಿ ದೂರವಾಣಿ ಮುಖಾಂತರ ತಿಳಿಸಿ ಚಂದಾದಾರರಾಗಲು ಕೋರಿದೆ.

# ನಾಡಿನಾದ್ಯಾಂತ ಸಂಘ ಸಂಸ್ಥೆಗಳಿಂದ – ಹೊ.ನಾ. ಹಿರಿಯಣ್ಣಸ್ವಾಮಿಯವರಿಗೆ ಶ್ರದ್ಧಾಂಜಲಿ



ಚಿಂತಾಮಣಿ ತಾಲ್ಲೂಕು ಬ್ರಾಹ್ಮಣ ಸಂಘ



ಚಿಕ್ಕಬಳ್ಳಾಪುರ ತಾಲೂಕು ಬ್ರಾಹ್ಮಣ ಸಂಘ



ವಿಜಾಪುರ ಬ್ರಾಹ್ಮಣ ಮಹಿಳಾ ಮಂಡಳಿ



ಬಸವನಗುಡಿ ಕ್ಷೇತ್ರ ಬ್ರಾಹ್ಮಣ ಸಂಘ



ಧಾರವಾಡ ಜಿಲ್ಲಾ ಬ್ರಾಹ್ಮಣ ಸೇವಾ ಸಂಘ ಹಾಗೂ ಗಾಯತ್ರಿ ಪ್ರತಿಷ್ಠಾನ



ಬ್ರಾಹ್ಮಣ ಸಮಾಜ ಕುಂದಗೋಳ ತಾ.



ಜಿಲ್ಲಾ ಬ್ರಾಹ್ಮಣ ಸಂಘ ರಾಯಚೂರು



ಗದಗ ಜಿಲ್ಲಾ ಬ್ರಾಹ್ಮಣ ಸಂಘ

PERIODICAL RATE
VIPRANUDI KANNADA MONTHLY
RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 12-06-2024 Date of Publishing 11-06-2024

ಶುಭಾಶಯಗಳು

ಡಾ|| ಉದಯ್ ಬಿ. ಗರುಡಾಚಾರ್
ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



Dr. Uday B. Garudachar
MLA, Chickpet Assembly Constituency
/BGUdayBJP www.udaygarudachar.in

If undelivered please return to :
VIPRANUDI
Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar